ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

ಆಸಿಫ್ ಪಾಷಾ ಆಲಿಯಾಸ್ ಆಸಿಫ್ -ವಿರುದ್ಧ ಕರ್ನಾಟಕ ರಾಜ್ಯ ಹೊಸಕೋಟೆ ಪೊಲೀಸ್ ಠಾಣೆ

ಕ್ರಿಮಿನಲ್ ಅಪೀಲುಸಂಖ್ಯೆ: 568/2014 (ಸಿ), ದಿನಾಂಕ 8 ನೇ ಫೆಬ್ರುವರಿ, 2019

ತೀರ್ಪ

ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ:

ಇಲ್ಲಿ ಏಕಮಾತ್ರ ಆಪಾದಿತ/ಅಪೀಲುದಾರ ಆಸಿಫ್ ಪಾಷಾ ಅಲಿಯಾಸ್ ಆಸಿಫ್ ಬೆಂಗಳೂರಿನ ಬೆಂಗಳೂರು ಗ್ರಾಮೀಣ ಜಿಲ್ಲೆಯ ಪ್ರಧಾನ ಸತ್ರ ನ್ಯಾಯಾಧೀಶರುದಿನಾಂಕ: 1/4.7.2014 ರಂದು ಎಸ್.ಸಿ.ಸಂಖ್ಯೆ: 166/2011 ರಲ್ಲಿ ಹೊರಡಿಸಿದ ಅಪರಾಧದ ನಿರ್ಣಯದ ತೀರ್ಪನ್ನು ಹಾಗೂ ಶಿಕ್ಷೆಯನ್ನು ಪ್ರಶ್ನಿಸಿದ್ದಾನೆ.ಅಧಿವಿಚಾರಣಾ ನ್ಯಾಯಾಲಯವು, ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕೆ ಅಪರಾಧಿಯನ್ನು ಅಪರಾಧಿಯೆಂದು ನಿರ್ಣಯಿಸಿದ್ದು, ಆಜೀವ ಕಾರಾವಾಸ ಶಿಕ್ಷೆಗೆ ಅವನನ್ನು ಒಳಪಡಿಸುವ ಹಾಗೂ 10,000/ರೂಪಾಯಿಗಳ ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದಲ್ಲಿ ಆರು ತಿಂಗಳುಗಳ ಕಾರಾವಾಸ ಶಿಕ್ಷೆಗೆ ಗುರಿಪಡಿಸಲಾಯಿತು ಹಾಗೂ ಮೃತನ ತಂದೆ ಎಂದರೆ ಪ್ರಾ.ಸಾ .2 ಅಬ್ದುಲ್ ಖಾದರ್ ರವರಿಗೆ 1,00,000/-ರೂಪಾಯಿಗಳ ನಷ್ಟ ಪರಿಹಾರವನ್ನು ಸಹ ನೀಡಲಾಯಿತು.ಅಷ್ಟೇ ಅಲ್ಲದೆ, ಉಳಿದ ಮೊತ್ತವನ್ನು ಸಂದಾಯ ಮಾಡದಿದ್ದರೆ, ಅದನ್ನು ಆಪಾದಿತನಿಂದ ಅಥವಾ ದಂಡ ಪ್ರಕ್ರಿಯಾ ಸಂಹಿತೆಯ 431 ನೇ ಪ್ರಕರಣಕ್ಕೆ ಅನುಸಾರವಾಗಿ ಅವನ ಸ್ವತ್ತಿನಿಂದ ವಸೂಲಿ ಮಾಡತಕ್ಕದ್ದು.

2. ಅಪರಾಧ ನಿರ್ಣಯ ಮತ್ತು ಶಿಕ್ಷೆಯ ಮೇಲಿನ ಸದರಿ ತೀರ್ಪನ್ನು ತರುವಾಯದಲ್ಲಿ ನಾವು ಚರ್ಚಿಸ ಬಯಸಿರುವ ವಿವಿಧ ಆಧಾರಗಳ ಆಧಾರದಲ್ಲಿ ಪ್ರಶ್ನಿಸಲಾಗಿದೆ.

3. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ವಿವರಿಸಲಾದಂತೆ ಅಪೀಲಿನ ಆಧಾರಗಳನ್ನು ಪ್ರಸ್ತಾವಿಸುವ ಮೊದಲು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಹೊರಗೆಡಹಲಾದ ಪ್ರಾಸಿಕ್ಯೂಷನ್ ಪ್ರಕರಣದ ಸಂಗತಿಗಳನ್ನು ಗಮನಕ್ಕೆ ತೆಗೆದುಕೊಳ್ಳುವುದು ನ್ಯಾಯಯುತ ಹಾಗೂ ಅಗತ್ಯವಾದುದಾಗಿದೆ.

4. ಸುಲ್ತಾನ್ ಎಂಬ ಹೆಸರಿನ ಮೃತನು ಎಂದರೆ ಶ್ರೀ ಪರ್ವೀಜ್ ಪಾಷರವರ ಆಲಿಯಾಸ್ ಪರ್ವೀಜ್ ಹೆಸರಿನ ದೂರುದಾರನ ಸಹೋದರನಲ್ಲದೆ ಮತ್ತಾರೂ ಅಲ್ಲ ಎಂಬುದು ಪ್ರಾಸಿಕ್ಯೂಷನ್ನ ವಾದವಾಗಿದೆ.ದೂರುದಾರ ಹಾಗೂ ಮೃತರು ಹೊಸಕೋಟೆ ಪಟ್ಟಣದಲ್ಲಿರುವ ರಜಪೂತ ಪೇಟೆಯ ನಿವಾಸಿಗಳಾಗಿದ್ದಾರೆ.ದಿನಾಂಕ: 17.2.2011 ರಂದು ದೂರುದಾರನು ಅವನ ಮನೆಯಲ್ಲಿದ್ದಾಗ, ರಾತ್ರಿ ಸುಮಾರು 9.45 ರ ಸಮಯದಲ್ಲಿ ಪ್ರಾ.ಸಾ .6 ನೂರ್ ಪಾಷಾನು, ಹೊಸಕೋಟೆ ಪಟ್ಟಣದ I ನೇ ದರ್ಜೆ ಕಾಲೇಜಿನ ಬಳಿ ಮೃತ ಸುಲ್ತಾನನನ್ನು ಕೆಲವು ಜನರು ಹೊಡೆದು ಸಾಯಿಸಿದರೆಂದು ದೂರುದಾರನಿಗೆ ತಿಳಿಸಿದ್ದಾನೆ ಎಂಬುದು ಪ್ರಾಸಿಕ್ಯೂಷನ್ನ ಮುಂದುವರಿದ ವಾದವಾಗಿದೆ.ಕೂಡಲೇ ದೂರುದಾರನು ಸ್ಥಳಕ್ಕೆ ಹೋಗಿದ್ದು, ಅಲ್ಲಿ ಈಗಾಗಲೇ ಅಪಾರ ಪ್ರಮಾಣದಲ್ಲಿ ಸೇರಿದ್ದ ಜನರನ್ನು ಗಮನಿಸಿದ್ದು, ರಕ್ತದ ಮಡುವಿನಲ್ಲಿ ಬಿದ್ದಿದ್ದ ಸುಲ್ತಾನನ ಮೃತದೇಹವನ್ನು ಕಂಡಿದ್ದಾನೆ.ಮೃತನ ಕುತ್ತಿಗೆಯನ್ನು ಕತ್ತರಿಸಿದ್ದುದನ್ನು ಹಾಗೂ ಮೃತನ ಕುತ್ತಿಗೆಯಲ್ಲಿ ಉದ್ದದ ಮಚ್ಚು ಇದ್ದುದನ್ನು ಗಮನಿಸಿದ್ದಾನೆ.ಅವನು ಸ್ಥಳದಲ್ಲಿ ಮೋಟಾರು ಬೈಕ್ ಕೀ ಹಾಗೂ ಒಂದು ಜೊತೆ ಚಪ್ಪಲಿ, ಕಪ್ಪು ಟೋಪಿ ಮತ್ತು ಮೋಟಾರು ಬೈಕನ್ನು ಗಮನಿಸಿದ್ದಾನೆ.

5. ಆಪಾದಿತ ವ್ಯಕ್ತಿಯು, ಸದರಿ ಸುಲ್ತಾನನು ಪರ್ವೀಜ್ ಪಾಷಾನ ಮಗಳಾದ ಸಯೀದ್ ಕೌಸರ್ಳೊಟ್ಟಿಗೆ ಪ್ರೀತಿ ಮಾಡುತ್ತಿದ್ದನು ಎಂಬ ಉದ್ದೇಶದ ಆಧಾರದಲ್ಲಿ ಮೃತನನ್ನು ಕೊಲೆ ಮಾಡಿರುವನು ಎಂದು ಸಂಶಯಪಟ್ಟಿದ್ದಾನೆ.ಘಟನೆ ನಡೆದ ದಿನಾಂಕದಂದು, ಮಧ್ಯಾಹ್ನದಲ್ಲಿ, ಸಹೀದ್ ಕೌಸರ್ನ ಕುಟುಂಬ ಸದಸ್ಯರು

ಯಾರೋ ಕೆಲವು ಜನ ವ್ಯಕ್ತಿಗಳು ದೂರುದಾರನ ಮನೆಗೆ ಬಂದು, ಅವಳಿಗೆ ಮದುವೆ ಹುಡುಗನನ್ನು ಹುಡುಕುತ್ತಿರುವುದಾಗಿ ತಿಳಿಸಿದ್ದಾರೆ.ಇದು ತಿಳಿದು ಬಂದ ಮೇಲೆ ಅದೇ ದಿನದಂದು ಸಂಜೆ ಸುಮಾರು 4.30 ರಲ್ಲಿ ದೂರುದಾರನು, ಅವನ ಮಾವ (ಪತ್ನಿಯ ತಂದೆ) ಹಾಗೂ ಅವನ ಮೂರು ಜನ ಸ್ನೇಹಿತರು ಹಾಗೂ ದೂರುದಾರನ ಚಿಕ್ಕಪ್ಪನು ಸಯೀದ್ ಕೌಸರ್ನ ತಂದೆ ಸೈಯಿದ್ ಪಾಷಾರ ಮನೆಗೆ ಹೋಗಿದ್ದು, ಸುಲ್ತಾನನಿಗೆ (ಮೃತ) ಸಯೀದಾ ಕೌಸರ್ಳನ್ನು ಮದುವೆ ಮಾಡಿಕೊಡಲು ವಿನಂತಿಸಿದ್ದಾರೆ.ಆ ಸಂದರ್ಭದಲ್ಲಿ ಸದರಿ ಸಯೀದಾ ಕೌಸರ್ಳ ಸಹೋದರ ಎಂದರೆ ಆಸಿಫ್ ಹೆಸರಿನ ಆಪಾದಿತನು ಮನೆಯಿಂದ ಆಚೆಗೆ ಬಂದು ಅವರನ್ನು ನಿಂದಿಸಿದ್ದಾನೆ ಹಾಗೂ ಈ ಸಂಬಂಧದಲ್ಲಿ ದೂರುದಾರ ಹಾಗೂ ಇತರರು ಮತ್ತೊಮ್ಮೆ ತಮ್ಮ ಮನೆಗೆ ಬಂದರೆ ಸುಲ್ತಾನನಿಗೆ ತಾನು ಏನಾದರೂ ಮಾಡುತ್ತೇನೆಂದೂ ಕೂಡ ಹೇಳಿದ್ದಾನೆ.ಸದರಿ ಉದ್ದೇಶದ ಆಧಾರದ ಮೇಲೆ ಬಹುಶಃ ಆಪಾದಿತನು ಮೃತನನ್ನು ಕೊಲೆ ಮಾಡಿರಬೇಕೆಂದು ಸಂದೇಹಪಡಲಾಗಿತ್ತು.

6. ಸದರಿ ಮೇಲಿನ ದೂರಿನ ಆಧಾರದ ಮೇಲೆ ಪೊಲೀಸರು ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕಾಗಿ ಕ್ರಿಮಿನಲ್ಸಂಖ್ಯೆ: 22/2011 ರಲ್ಲಿ ಪ್ರಕರಣ ದಾಖಲಿಸಿದ್ದು ತನಿಖೆಯನ್ನು ಪ್ರಾರಂಭಿಸಿದ್ದಾರೆ.ತನಿಖೆ ನಡೆಯುವ ಅವಧಿಯಲ್ಲಿ, ಪೊಲೀಸರು, ಆಪಾದಿತನು ಮೃತ ಸುಲ್ತಾನನ ಕೊಲೆಯನ್ನು ಮಾಡಿರುವನೆಂದು ರುಜುವಾತುಪಡಿಸಿ, ತದನಂತರ ಪೊಲೀಸರು ಮೇಲಿನ ಸದರಿ ಅಪರಾದದ ಸಂಬಂಧ ಆಪಾದಿತನ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸಿದ್ದಾರೆ.

7. ವ್ಯವಹರಣೆಗಳಲ್ಲಿ ತೊಡಗಿದ ನಂತರ ಅಧಿವಿಚಾರಣಾ ನ್ಯಾಯಾಲಯವುದಿನಾಂಕ: 18.2.2011 ರಂದು ಆಪಾದಿತನು ಹಾಜರಾಗಿರುವುದನ್ನು ನಿಶ್ಚಿತಪಡಿಸಿಕೊಂಡು, ಆಪಾದಿತನ ವಿರುದ್ಧ ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಮೇರೆಗೆ ದಂಡನೀಯವಾಗಬಹುದಾದ ಅಪರಾಘಕ್ಕೆ ಸಂಬಂಧಿಸಿದ ಆರೋಪಗಳನ್ನು ರೂಪಿಸಿದೆ.ಆಪಾದಿತನು, ತಾನು ಆರೋಪಿತನಲ್ಲವೆಂದು ವಾದಿಸಿದ್ದು, ಅಧಿವಿಚಾರಣೆ ಮಾಡಬೇಕೆಂದು ಕ್ಲೇಮು ಮಾಡಿದ್ದಾನೆ.ಆದುದರಿಂದ ಅವನನ್ನು ಅಧಿವಿಚಾರಣೆಗೆ ಗುರಿಪಡಿಸಲಾಗಿತ್ತು.

8. ಪ್ರಾಸಿಕ್ಯೂಷನ್ನು ಆಪಾದಿತನು ಅಪರಾಧಿಯೆಂಬುದನ್ನು ಮನವರಿಕೆ ಮಾಡಿಕೊಡುವ ಸಲುವಾಗಿ ಪ್ರಾ.ಸಾ .1 ರಿಂದ 18 ರ ವರೆಗಿನ ಸುಮಾರು 18 ಜನ ಸಾಕ್ಷಿದಾರರನ್ನು ವಿಚಾರಣೆ ಮಾಡಲಾಗಿದ್ದು ಪಿ. ರಿಂದ ಪಿ .24 ರ ವರೆಗಿನ ನಿಶಾನೆಗಳನ್ನು ಗುರುತುಹಾಕಲಾಗಿದ್ದು, ಪ್ರಾ.ಸಾ .2 ನ್ನು ಪಾಟಿ ಸವಾಲು ನಡೆಸುವ ಅವಧಿಯಲ್ಲಿ ಡಿ -1 ಹಾಗೂ ಡಿ -2 ನಿಶಾನೆಗಳನ್ನು ಗುರುತು ಹಾಕಲಾಗಿದೆ.ಮುದ್ದೆಮಾಲು 1 ರಿಂದ 18 ರ ವರೆಗಿನ ಮುದ್ದೆ ಮಾಲುಗಳನ್ನು ಗುರುತು ಹಾಕಲಾಗಿದೆ.ಪ್ರಾಸಿಕ್ಯೂಷನ್ ಸಾಕ್ಷ್ಯವನ್ನು ಪೂರ್ಣಗೊಳಿಸಿದ ನಂತರ, ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಅಡಿಯಲ್ಲಿ ಆಪಾದಿತನನ್ನು ವಿಚಾರಣೆಗೊಳಪಡಿಸಿತ್ತು ಹಾಗೂ ಅವನಿಗೆ ಕೇಳಿದ ಪ್ರಶ್ನೆಗಳಿಗೆ ಅವನು ನೀಡಿದ ಉತ್ತರಗಳನ್ನು ದಾಖಲಿಸಲಾಗಿತ್ತು.ಆಪಾದಿತನನ್ನು ಆಯ್ಕೆ ಮಾಡದಿದ್ದುದರಿಂದ ಯಾವುದೇ ಪ್ರತಿವಾದ ಸಾಕ್ಷ್ಯವನ್ನು ಮುಂದುವರಿಸುವುದು.ಎರಡೂ ಕಡೆಯ ಸುನಾವಣೆ ನಡೆಸಿದ ನಂತರ ಅಧಿವಿಚಾರಣಾ ನ್ಯಾಯಾಲಯವು, ಪ್ರಾಸಿಕ್ಯೂಷನ್ನು ಯುಕ್ತವಾಗಿರಬಹುದಾದ ಸಂದೇಹವನ್ನು ಮೀರಿ ಆಪಾದಿತನ ವಿರುದ್ಧ ಪ್ರಕರಣವನ್ನು ರುಜುವಾತುಪಡಿಸಿದೆಯೆಂಬ ನಿರ್ಣಯಕ್ಕೆ ಬಂದಿರುತ್ತದೆ ಹಾಗೆಯೇ ಮೇಲೆ ಸೂಚಿಸಲಾದಂಥ ಅಪರಾಧ ನಿರ್ಣಯದ ಪ್ರಶ್ನಿತ ತೀರ್ಪನ್ನು ಹಾಗೂ ಶಿಕ್ಷೆಯನ್ನು ಇದು ದಾಖಲಿಸಿದೆ.

9. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಶಂಕರಪ್ಪನವರು, ನ್ಯಾಯಾಲಯದ ಮುಂದೆ, ಹಲವಾರು ಸಾಕ್ಷಿದಾರರನ್ನು ವಿಚಾರಣೆ ಮಾಡಿದ್ದರೂ ಕೂಡ, ಬಹುತೇಕ ಸಾಕ್ಷಿದಾರರು ಪ್ರಾಸಿಕ್ಯೂಷನ್ನ ತಂಡಕ್ಕೆ ಪ್ರತಿಕೂಲ ಸಾಕ್ಷ್ಯವಾಗಿ ಪರಿಣಮಿಸಿದ್ದಾರೆಂದು ಪಟ್ಟುಬಿಡದೆ ವಾದಿಸಿದ್ದಾರೆ.ಈ ಘಟನೆಗೆ ಏಕಮಾತ್ರ ಸಾಕ್ಷಿದಾರ ಎಂದರೆ ಪ್ರಾ.ಸಾ .4 ನಾಗಪ್ಪ ಇವರೂ ಕೂಡ ಪ್ರಾಸಿಕ್ಯೂಷನ್ನ ವಾದವನ್ನು ಸಂಪೂರ್ಣವಾಗಿ ಬೆಂಬಲಿಸಿಲ್ಲವೆಂದು ಅವರು ವಾದಿಸಿದ್ದಾರೆ.ಈ ಸಾಕ್ಷಿದಾರನ ಪಾಟೀ ಸವಾಲನ್ನು ಇತರ ಸಾಕ್ಷ್ಯಾಧಾರಗಳೊಂದಿಗೆ ಪರೀಕ್ಷಿಸಿದರೆ, ಇವನನ್ನು ಘಟನೆಯ ಪ್ರತ್ಯಕ್ಷ ಸಾಕ್ಷಿದಾರನೆಂದು ಪರಿಗಣಿಸಲು ಸಾಧ್ಯವಿಲ್ಲ.ವಾಸ್ತವವಾಗಿ ಅಧಿವಿಚಾರಣಾ ನ್ಯಾಯಾಲಯವು ಅವನನ್ನು ಪ್ರತ್ಯಕ್ಷ ಸಾಕ್ಷಿದಾರನೆಂದು ಪರಿಗಣಿಸಿರುವುದಿಲ್ಲ.ಅವನು ಘಟನೆಯನ್ನು ನೋಡಿರಲಿಲ್ಲ.ಆದರೂ ಕೂಡ ಅಧಿವಿಚಾರಣಾ ನ್ಯಾಯಾಲಯವು, ಆಪಾದಿತನನ್ನು ತದನುಸಾರವಾಗಿ ಅಪರಾಧ ನಿರ್ಣಯ ಮತ್ತು ಶಿಕ್ಷೆಯ ತೀರ್ಪನ್ನು ದೋಷಯುಕ್ತವಾಗಿ ದಾಖಲಿಸಿದ ಅನಗತ್ಯ ಸಾಕ್ಷ್ಯಾಧಾರಗಳನ್ನು ಅವಲಂಬಿಸಿದೆ.ಅಷ್ಟೇ ಅಲ್ಲದೆ, ಕಡೆಯಲ್ಲಿ

ನೋಡಿದಂಥ ಸನ್ನಿವೇಶದಂಥ ಇತರ ಸಂದರ್ಭ ಇರಲಿಲ್ಲವೆಂದು ವಾದಿಸಿದ್ದಾರೆ.ಪ್ರಾ.ಸಾ. 4 ನೀಡಿದ ಆಪಾದಿತನ ಗುರುತನ್ನು ಸರಿಯಾಗಿ ರುಜುವಾತುಪಡಿಸಲಾಗಿಲ್ಲ.ಅಷ್ಟೇ ಅಲ್ಲದೆ, ಪ್ರಾಸಿಕ್ಯೂಷನ್ನು ಅವಲಂಬಿಸಿದ್ದ ಕರೆಪಟ್ಟಿಯನ್ನು ನಿಶಾನೆಗಳು ಪಿ .21 ಹಾಗೂ ಪಿ .22 ಎಂದು ಗುರುತು ಹಾಕಲಾಗಿದ್ದು, ಅವುಗಳನ್ನು ನ್ಯಾಯಾಲಯಕ್ಕೆ ಮನದಟ್ಟಾಗುವಂತೆ ರುಜುವಾತುಪಡಿಸಿರುವುದಿಲ್ಲ ಹಾಗೂ ಇದು ಭಾರತೀಯ ಸಾಕ್ಷ್ಯ ಅಧಿನಿಯಮದ 65-ಬಿ ಪ್ರಕರಣಕ್ಕೆ ಧಕ್ಕೆಯನ್ನುಂಟು ಮಾಡುತ್ತದೆ.ಅಷ್ಟೇ ಅಲ್ಲದೆ ಅವರು ಮೋಟಾರು ಸೈಕಲ್ಲನ್ನು ವಶಪಡಿಸಿಕೊಂಡಿರುವುದನ್ನು ರುಜುವಾತುಪಡಿಸಿಲ್ಲ ಹಾಗೂ ಇದನ್ನು ಸಾಕ್ಷಿದಾರ ಸಮರ್ಥಿಸಿಲ್ಲವೆಂದು ವಾದಿಸಿದ್ದಾರೆ.ಅಷ್ಟೇ ಅಲ್ಲದೆ, ನಿಶಾನೆ ಪಿ .24 ಎಸ್‌ಎಸ್‌ಎಲ್ ವರದಿಯನ್ನು ಕಾನೂನಿಗನುಸಾರವಾಗಿ ರುಜುವಾತುಪಡಿಸಿಲ್ಲ ಹಾಗೂ ಈ ಸಂಬಂಧ ಸಾಕ್ಷ್ಯದಾರನನ್ನು ವಿಚಾರಣೆ ಮಾಡಿಲ್ಲ.

10. ಮಾನ್ಯ ವಕೀಲರು, ಪ್ರಾ.ಸಾ. 5 ಪರ್ವೀಜ್ ಪಾಷಾನು ಪ್ರಮುಖ ಸಾಕ್ಷಿದಾರ ಹಾಗೂ ಮೃತರ ತಾಯಿಯು ಪ್ರಾಸಿಕ್ಯೂಷನ್ಗೆ ಪ್ರತಿಕೂಲ ಸಾಕ್ಷ್ಯವಾಗಿ ಪರಿಣಮಿಸಿದ್ದಾಳೆ ಎಂದು ನಿವೇದಿಸಿದ್ದಾರೆ.ಒಪ್ಪಿಕೊಂಡಿರುವಂತೆ, ಘಟನೆಯು, ರಾತ್ರಿ 9.45 ರ ರಾತ್ರಿಯಲ್ಲಿ, ಬೆಳಕು ಇರುವ ಸ್ಥಳದಲ್ಲಿ ನಡೆದಿದ್ದು, ಇದನ್ನು ಸಹ ಯುಕ್ತವಾಗಿ ರುಜುವಾತುಪಡಿಸಿಲ್ಲ.ಪ್ರಾಸಿಕ್ಯೂಷನ್ನು ಈ ಪ್ರಕರಣಕ್ಕೆ ಸಂಬಂಧಪಟ್ಟ ಮುಖ್ಯ ಸಾಕ್ಷಿದಾರಳಾದ ಜಯಲಕ್ಷ್ಮಿಯನ್ನೂ ಸಹ ವಿಚಾರಣೆ ಮಾಡಿಲ್ಲ.ಅಷ್ಟೇ ಅಲ್ಲ. ಪ್ರಾಸಿಕ್ಯೂಷನ್ನು ನೀಡಿದ ಉದ್ದೇಶವನ್ನು ರುಜುವಾತುಪಡಿಸಿಲ್ಲ.ಆದುದರಿಂದ ದಾಖಲೆಯಲ್ಲಿರುವ ಸಂಪೂರ್ಣ ಸಾಕ್ಷ್ಯವನ್ನು ಒಟ್ಟಾರೆಯಾಗಿ ಪರಿಗಣಿಸಿದ ಮೇಲೆ, ಪ್ರಾಸಿಕ್ಯೂಷನ್ನು ಯುಕ್ತ ಸಂದೇಹವನ್ನು ಮೀರಿದ ವಾದವನ್ನು ರುಜುವಾತು ಪಡಿಸಿದೆಯೆಂದು ಹೇಳಲಾಗುವುದಿಲ್ಲ.

11. ಇದಕ್ಕೆ ಬದಲಾಗಿ, ರಾಜ್ಯ ಸರ್ಕಾರಿ ಅಭಿಯೋಜಕರು, ಪ್ರತ್ಯಕ್ಷ ಸಾಕ್ಷಿದಾರ ಪ್ರಾ.ಸಾ .4 ನಾಗಪ್ಪನು, ಪ್ರಾಸಿಕ್ಯೂಷನ್ನ ವಾದವನ್ನು ಸಮರ್ಥಿಸಿದ್ದಾನೆಂದು ವಾದಿಸಿದ್ದಾರೆ.ಆಪಾದಿತನ ದೃಷ್ಟಾಂತದಲ್ಲಿ ದೊಣ್ಣೆಯನ್ನು ವಸೂಲಿ ಮಾಡುವ ಸಂಬಂಧ ಪಂಚ ಸಾಕ್ಷಿದಾರರಾಗಿರುವ ಕೆಲವು ಸಾಕ್ಷಿದಾರರು ಬೆಂಬಲಿಸದಿದ್ದರೂ, ಪ್ರಾಸಿಕ್ಯೂಷನ್ನ ವಾದವನ್ನು ತನಿಖಾಧಿಕಾರಿಯ ಸಾಕ್ಷ್ಯವನ್ನು ಈ ಸಂಬಂಧದಲ್ಲಿ ನಂಬಬಹುದು ಎಂಬುದಾಗಿದೆ.ಆಪಾದಿತನಿಗೆ ಸಂಬಂಧಿಸಿದ ಈ ನಿರ್ದಿಷ್ಟ ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿದ್ದು, ವಶಪಡಿಸಿಕೊಳ್ಳಲಾದ ಸಲಕರಣೆಗಳೊಂದಿಗೆ ಮೃತನ ರಕ್ತದ ಗುಂಪು ಹೊಂದಿಕೊಳ್ಳುತ್ತಿದೆಯೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತಿದ್ದರೂ ಕೂಡ ಅವು ನಿಶಾನೆ ಪಿ .24 ವಿಧಿವಿಜ್ಞಾನ ವರದಿಯನ್ನು ಸಂಪೂರ್ಣವಾಗಿ ಬೆಂಬಲಿಸಿವೆ.ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯದಲ್ಲಿ ಕೆಲವು ವ್ಯತ್ಯಾಸಗಳಿದ್ದರೂ ಕೂಡ ಕೆಲವು ಸಾಕ್ಷಿದಾರರು ಪ್ರತಿಕೂಲಸಾಕ್ಷ್ಯವಾಗಿ ಪರಿಣಮಿಸಿದ್ದಾರೆ.ಇದು ಯುಕ್ತ ಸಂದೇಹವನ್ನು ಮೀರಿದ ರುಜುವಾತಾಗಿಲ್ಲದಿರುವುದರಿಂದ ಪ್ರಾಸಿಕ್ಯೂಷನ್ನ ಪ್ರಕರಣವನ್ನು ತಳ್ಳಿಹಾಕಲು ಇದು ಸಾಕಾಗುವುದಿಲ್ಲ ಎಂದು ವಾದಿಸಿದ್ದಾರೆ.

12. ಮಾಡಲಾದ ಸದರಿ ಮೇಲಿನ ನಿವೇದನೆಗಳನ್ನು ಅನುಸರಿಸಿ, ಇದನ್ನು ಕಂಡುಕೊಳ್ಳುವುದು ಈ ನ್ಯಾಯಾಲಯಕ್ಕೆ ನ್ಯಾಯಸಮ್ಮತ ಹಾಗೂ ಅಗತ್ಯವಾಗಿದೆ.

(1) ಅವನು ಮೃತ ಸುಲ್ತಾನನ ಕೊಲೆಯನ್ನು ಮಾಡಿರುವನು ಹಾಗೂ ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಮೇರೆಗೆ ಅಪರಾಧವನ್ನು ಎಸಗಿರುವನು ಎಂಬ ಎಲ್ಲಾ ಯುಕ್ತ ಸಂದೇಹವನ್ನು ಮೀರಿ ಆಪಾದಿತನ ವಿರುದ್ಧ ಕಲ್ಪಿಸಲಾದಂಥ ವಾದವನ್ನು ಪ್ರಾಸಿಕ್ಯೂಷನ್ನು ರುಜುವಾತುಪಡಿಸಿದೆಯೇ?

(2) ಅಧಿವಿಚಾರಣಾ ನ್ಯಾಯಾಲಯವು ಮೇಲೆ ಸೂಚಿಸಲಾದಂತೆ ಆಪಾದಿತನನ್ನು ಶಿಕ್ಷಿಸುವಲ್ಲಿ ಯಾವುದೇ ಕಾನೂನಾತ್ಮಕ ಹಾಗೂ ಸಂಗತಿಗಳ ದೋಷವನ್ನು ಎಸಗಿದೆಯೇ?

13. ದಾಖಲೆಯಲ್ಲಿ ಲಭ್ಯವಿರುವ ಮುಖ್ಯ ಸಾಕ್ಷ್ಯವನ್ನು ಪ್ರಸ್ತಾಪಿಸುವ ಮೊದಲು, ನಾವು, ಅಧಿವಿಚಾರಣಾ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಲಾದ ಸಾಕ್ಷಿದಾರರ ಸಾಕ್ಷ್ಯದಲ್ಲಿ ಸ್ಥೂಲನೋಟ ಹರಿಯಬಯಸುತ್ತೇವೆ.

14. ಪ್ರಾ.ಸಾ .1 ಇಮ್ರಾನ್ಖಾನ್, ಪಂಚನಾಮೆ ಸಾಕ್ಷಿದಾರನಾಗಿದ್ದಾನೆ.ಪ್ರಾಸಿಕ್ಯೂಷನ್ ಪ್ರಕಾರ, ಅವನು ರಾತ್ರಿ 9 ಗಂಟೆಯಲ್ಲಿ ಮೃತದೇಹವನ್ನು ನೋಡಿದ್ದಾನೆ.ನಿಶಾನೆ ಪಿ .1 ಪಂಚನಾಮೆ ವ್ಯವಹರಣೆಯಾಗಿದೆ.ಅವನು, ತಾನು

ಸದರಿ ಪಂಚನಾಮೆಗೆ ಸಹಿ ಮಾಡಿದ್ದೇನೆಂದು ಹಾಗೂ ತಾನು ಮುದ್ದೆಮಾಲು -01 ಲಾಂಗು, ಮುದ್ದೆಮಾಲು 2 ರಕ್ತದ ಕಲೆಯಿರುವ ಮಣ್ಣು, ಮುದ್ದೆ ಮಾಲು -3 ಮಾದರಿ ಮಣ್ಣು, ಮುದ್ದೆಮಾಲು 4 ಕಪ್ಪು ಟೋಪಿ, ಮುದ್ದೆಮಾಲು -5 ಚಪ್ಪಲಿಗಳು, ಮುದ್ದೆ ಮಾಲು -6 ಮೊಬೈಲ್ ಹ್ಯಾಂಡ್ಸೆಟ್, ಮುದ್ದೆಮಾಲು -7 ಹಾಗೂ 8, ಘಟನೆ ನಡೆದ ಸ್ಥಳದಲ್ಲಿ ಕಂಡುಬಂದಿದ್ದ ಮೋಟಾರು ಬೈಕ್ನ ಹಿಂದಿನ ಹಾಗೂ ಮುಂದಿನ ಭಾಗದ ಭಾವಚಿತ್ರಗಳು ಹಾಗೂ ಮುದ್ದೆ ಮಾಲು -9 ಪಂಚನಾಮೆಯ ಸಮಯದಲ್ಲಿ ಪೊಲೀಸರು ವಶಪಡಿಸಿಕೊಂಡಿದ್ದ ಎಲ್ಲಾ ಮೋಟಾರು ಸೈಕಲ್ ಕೀಗಳನ್ನು ಸಹ ಅವನು ಗುರುತಿಸಿದ್ದಾನೆ.

15. ಪ್ರಾ.ಸಾ .2 ಅಬ್ದುಲ್ ಖಾದರ್ ಅಲಿಯಾಸ್ ಖಾದರ್ನು ಮೃತನ ತಂದೆಯಲ್ಲದೆ ಬೇರಾರು ಅಲ್ಲ. ಅವನು ಇದಕ್ಕೆ ಆದ ಪ್ರೇರಣೆಯನ್ನು ಹಾಗೂ ಕಡೆಯಲ್ಲಿ ನೋಡಿದ ಸನ್ನಿವೇಶದ ಬಗ್ಗೆ ಮಾತನಾಡಿದ್ದಾನೆ.

16. ಪ್ರಾ.ಸಾ .3 ಅಮ್ಮುಖಾನ್ನು ನಿಶಾನೆ ಪಿ .3 ಅಭಿಗ್ರಹಣ ಮಹಜರಿಗೆ ಸಾಕ್ಷಿದಾರನಾಗಿದ್ದು, ಇದರ ಅಡಿಯಲ್ಲಿ ಪೊಲೀಸರು ಆಪಾದಿತನಿಂದ ದೊಣ್ಣೆಯನ್ನು ಪಡೆದುಕೊಂಡಿದ್ದಾರೆ ಹಾಗೂ ಅವನು ನಿಶಾನೆ ಪಿ .2 ಸ್ಥಳ ಮಹಜರಿನ ಪಂಚನಾಮೆ ಸಾಕ್ಷಿದಾರನಾಗಿದ್ದಾನೆ ಹಾಗೂ ಅವನು, ಪೊಲೀಸರು ಒಂದು ಟೀ ಷರ್ಟನ್ನು, ಒಂದು ಜೀನ್ಸ್ ಪ್ಯಾಂಟನ್ನು ಹಾಗೂ ನಿಶಾನೆ ಪಿ .4 ಮಹಜರಿನ ಅಡಿಯಲ್ಲಿ ಮುದ್ದೆಮಾಲು 11 ರಿಂದ 18 ರ ವರೆಗೆ ಗುರುತು ಹಾಕಲಾಗಿರುವ ಒಂದು ಮೊಬೈಲ್ ಫೋನನ್ನು ಪಡೆದುಕೊಂಡಿದ್ದಾನೆಂದು ಸಹ ಹೇಳಿಕೆ ನೀಡಿದ್ದಾನೆ.

17. ಪ್ರಾ.ಸಾ .4 ನಾಗಪ್ಪನು, ಘಟನೆಯನ್ನು ನೋಡಿರುವ ಪ್ರತ್ಯಕ್ಷ ಸಾಕ್ಷಿಯಾಗಿದ್ದಾನೆ ಹಾಗೂ ಅವನು ಘಟನೆ ನಡೆದ ದಿನಾಂಕದಂದು ಸುಲ್ತಾನ್ನ ಮೃತದೇಹವನ್ನು ನೋಡಿ ಕೂಡಲೇ, ಜಯಲಕ್ಷ್ಮಿ ಎಸ್ಪಿ ಎಂಬ ಹೆಸರಿನ ಹೆಂಗಸಿನ ಮೂಲಕ ತಿಳಿಸಿದ್ದನು.ಅವನೂ ಕೂಡ ನ್ಯಾಯಾಲಯದ ಮುಂದೆ ರಿಂದ 10 ರ ವರೆಗಿನ ಮುದ್ದೆ ಮಾಲುಗಳನ್ನು ಸಹ ಗುರುತಿಸಿದ್ದಾನೆ.

18. ಪ್ರಾ.ಸಾ.5 ಪರ್ವೀಜ್ ಪಾಷಾ ಆಗಿದ್ದಾನೆ.ನಾವು ಈಗಾಗಲೇ ಗಮನಿಸಿದಂತೆ ಅವನು ದೂರುದಾರನಾಗಿದ್ದಾನೆ.ವಾಸ್ತವವಾಗಿ ಅವನು, ಪ್ರಾರಂಭದಲ್ಲಿ ಕೆಲವು ಸಮಯದವರೆಗೆ ಪ್ರತಿಕೂಲ ಸಾಕ್ಷ್ಯವಾಗಿ ಪರಿಣಮಿಸಿದ್ದ ಆದರೆ ಅವನು ಪೊಲೀಸರಿಗೆ ದೂರು ದಾಖಲಿಸುವ ಮಟ್ಟಿಗೆ ಪ್ರಾಸಿಕ್ಯೂಷನ್ ವಾದವನ್ನು ಬೆಂಬಲಿಸಿದ್ದಾನೆ.ಉದ್ದೇಶ ಮತ್ತು ಇತರ ಸಂಗತಿಗಳಿಗೆ ಸಂಬಂಧಪಟ್ಟಂತೆ ಪ್ರಕರಣದ ಉಳಿದ ಅಂಶಗಳು, ಪ್ರಾಸಿಕ್ಯೂಷನ್ನ ವಾದವನ್ನು ಸಮರ್ಥಿಸಿರುವುದಿಲ್ಲ.

19. ಪ್ರಾ.ಸಾ. 6 ನೂರ್ಪಾಷಾ ರಾತ್ರಿ ಸುಮಾರು 9.30 ರಲ್ಲಿ ಸ್ಥಳದಲ್ಲಿದ್ದ ಸಾಕ್ಷಿದಾರನಾಗಿದ್ದಾನೆ ಹಾಗೂದಿನಾಂಕ: 7.2.2011 ರಂದು ಅವನು, ಮೃತ ಸುಲ್ತಾನನ ಮೃತದೇಹದ ಬಗ್ಗೆ ಪ್ರಾ.ಸಾ .5 ಪರ್ವೀಜ್ ಪಾಷಾನಿಗೆ ತಿಳಿಸಿದ್ದಾನೆ.ಆದರೆ, ಪ್ರಾಸಿಕ್ಯೂಷನ್ಗೆ ಸ್ವಲ್ಪಮಟ್ಟಿಗೆ ಪ್ರತಿಕೂಲ ಸಾಕ್ಷ್ಯವಾಗಿ ಪರಿಣಮಿಸಿದ್ದಾನೆ.

20. ಪ್ರಾ.ಸಾ .7 ಇಮ್ರಾನ್ ಉಲ್ಲಾ ಬೇಗ್, ನಿಶಾನೆ ಪಿ .8 ಕ್ಕೆ ಪಂಚನಾಮೆ ಸಾಕ್ಷಿದಾರನಾಗಿದ್ದು, ಇದರ ಅಡಿಯಲ್ಲಿ ಪೊಲೀಸರು ಮೃತನ ಬಟ್ಟೆಗಳನ್ನು ವಶಪಡಿಸಿಕೊಂಡಿದ್ದಾರೆ.ಈ ಸಾಕ್ಷಿದಾರನು ಸಹ ಪ್ರಾಸಿಕ್ಯೂಷನ್ನ ವಾದವನ್ನು ಸಮರ್ಥಿಸಿರುವುದಿಲ್ಲ.

21. ಪ್ರಾ.ಸಾ.8 ಜುಬೈರ್ ಪಾಷಾನು ಇದೇ ನಿಶಾನೆ ಪಿ.8 ಪಂಚನಾಮೆಗೆ ಮತ್ತೊಬ್ಬ ಸಾಕ್ಷಿದಾರನಾಗಿದ್ದಾನೆ.ಇವನೂ ಕೂಡ ಪ್ರಾಸಿಕ್ಯೂಷನ್ಗೆ ಪ್ರತಿಕೂಲ ಸಾಕ್ಷ್ಯವಾಗಿ ಪರಿಣಮಿಸಿದ್ದಾನೆ.

22. ಪ್ರಾ.ಸಾ .9 ಅಶ್ರಫ್ ಉನ್ನೀಸಾ, ಮೃತನ ತಾಯಿಯಾಗಿದ್ದಾಳೆ.ಇವಳೂ ಕೂಡ ಪ್ರಾಸಿಕ್ಯೂಷನ್ನ ವಾದವನ್ನು ಸಮರ್ಥಿಸಿಲ್ಲ.ಇವಳು ಘಟನೆಯ ಉದ್ದೇಶ ಹಾಗೂ ಘಟನೆ ನಡೆದ ದಿನಾಂಕದಂದು ಸ್ವೀಕರಿಸಿದ ಮಾಹಿತಿ ಕುರಿತು ನ್ಯಾಯಾಲಯದ ಮು 0 ದೆ ರುಜುವಾತುಪಡಿಸಲು ವಿಚಾರಣೆ ಮಾಡಲಾಗಿತ್ತು.

23. ಪ್ರಾ.ಸಾ .10 ರಿಜ್ವಾನಾ ಬಾನು ಮೃತನ ಹಿರಿಯ ಸಹೋದರಿಯಾಗಿದ್ದಾಳೆ.ಅವಳನ್ನು ಸಹ ಉದ್ದೇಶವನ್ನು ರುಜುವಾತುಪಡಿಸುವ ಉದ್ದೇಶಕ್ಕಾಗಿ ವಿಚಾರಣೆ ಮಾಡಲಾಗಿತ್ತು ಆದರೆ ಅವಳು ಪ್ರಾಸಿಕ್ಯೂಷನ್ನ ವಾದವನ್ನು ಸಮರ್ಥಿಸಿಲ್ಲ.

24. ಪ್ರಾ.ಸಾ .11, ಎಸ್. ವಿಶ್ವನಾಥ್ ಲೋಕೋಪಯೋಗಿಯ ಸಹಾಯಕ ಎಂಜಿನಿಯರ್ ಆಗಿದ್ದು ಇವರು ನಿಶಾನೆ ಪಿ .13 ರ ಪ್ರಕಾರ ಅಪರಾಧದ ದೃಶ್ಯದ ಸ್ಥೂಲ ನಕ್ಷೆಯನ್ನು ಬರೆದಿದ್ದಾರೆ.

25. ಪ್ರಾ.ಸಾ .12 ಅಫ್ರೋಜ್ ಪಾಷಾನು, ಮೋಟಾರು ಸೈಕಲ್ನ ಮಾಲೀಕನ ಮುಖ್ತ್ಯಾರನಾಮೆಯ ಆಧಾರದ ಮೇಲೆ ಪ್ರಕರಣದಲ್ಲಿ ಸೇರಿದ್ದ ಮೋಟಾರು ಸೈಕಲ್ಲನ್ನು ಮಧ್ಯಂತರ ಅಭಿರಕ್ಷೆಗೆ ತೆಗೆದುಕೊಂಡಿರುವ ವ್ಯಕ್ತಿಯಾಗಿದ್ದಾನೆ.

26. ಪ್ರಾ.ಸಾ .13 ಸಂಖ್ಯೆ.ಕೆಎ -53/ಕೆ -8866 ಸಂಖ್ಯೆಯನ್ನು ಹೊಂದಿದ್ದ ಮೋಟಾರು ಸೈಕಲ್ನ ಮಾಲೀಕನಾಗಿದ್ದು, ಮೋಟಾರು ಸೈಕಲ್ಲನ್ನು ವಶಪಡಿಸಿಕೊಂಡಿದ್ದ ಸಮಯದಲ್ಲಿ ಪಂಚನಾಮೆ ಸ್ಥಳದಲ್ಲಿ ಇದು ಕಂಡುಬಂದಿತ್ತು.ಇವನು ಪ್ರಾಸಿಕ್ಯೂಷನ್ನ ವಾದವನ್ನು ಸಮರ್ಥಿಸಿಲ್ಲ.ಒಂದು ವರ್ಷದ ಹಿಂದೆ ಆಪಾದಿತನಿಗೆ ವಾಹನವನ್ನು ಮಾರಾಟ ಮಾಡಿದ್ದನೆಂಬುದನ್ನು ತೋರಿಸಲು ಇವನನ್ನು ವಿಚಾರಣೆ ಮಾಡಲಾಗಿತ್ತು ಆದರೆ ಇದನ್ನು ಇವನು ನಿರಾಕರಿಸಿದ್ದಾನೆ.

27. ಪ್ರಾ.ಸಾ .14, ರಾಮ್ಪ್ರಕಾಶ್ ಮುಖ್ಯ ಅಧಿಕಾರಿ, ಇವರು, ಹೊಸಕೋಟೆ ಪೊಲೀಸು ಠಾಣೆಯ ಅಂದಿನ ಪೊಲೀಸು ನಿರೀಕ್ಷಕರ ಮನವಿಯ ಮೇರೆಗೆ, ಅವರು ಅಪರಾಧ ನಡೆದ ಸ್ಥಳಕ್ಕೆ ಸಂಬಂಧಿಸಿದ ಖಾತಾ ಉದ್ಧೃತವನ್ನು ನೀಡಿದ್ದು, ಪೊಲೀಸು ನಿರೀಕ್ಷಕರಿಗೆ ನಿಶಾನೆ ಪಿ .15 ರ ಪ್ರಕಾರ ಖಾತಾ ಉದ್ಧೃತವನ್ನು ನೀಡಿದ್ದಾರೆ.

28. ಪ್ರಾ.ಸಾ .15 ನಟರಾಜ್ ಮೂರ್ತಿ, ಪ್ರಥಮ ಮಾಹಿತಿ ವರದಿಯನ್ನು ಮಾಡಿರುವ ಹಾಗೂ ಅಧಿಕಾರವ್ಯಾಪ್ತಿ ದಂಡಾಧಿಕಾರಿಯವರಿಗೆ ದೂರು ನೀಡಿದ ಪೊಲೀಸು ಪೇದೆಯಾಗಿದ್ದಾರೆ.

29. ಪ್ರಾ.ಸಾ. 16 ಡಾ || ಶಿವಕುಮಾರ್ ಕೆ.ಆರ್. ಇವರು ಮೃತರ ಮೃತ ದೇಹದ ಶವಪರೀಕ್ಷೆಯನ್ನು ನಡೆಸಿರುವ ವೈದ್ಯರಾಗಿದ್ದಾರೆ.ಅವರು, ಮೃತರಿಗೆ ಆಘಾತ ಹಾಗೂ ರಕ್ತಸ್ರಾವವಾದ ಕಾರಣದಿಂದ ದೇಹದ ಅವಶ್ಯಕ ಅಂಗಗಳು ಗಾಯಗೊಂಡಿದ್ದು ಸಾವು ಸಂಭವಿಸಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ ಹಾಗೂ ಮರಣೋತ್ತರ ಶವಪರೀಕ್ಷೆಗೆ ಮುನ್ನ ಸುಮಾರು 12-24 ಗಂಟೆಯಲ್ಲಿ ಸಾವು ಸಂಭವಿಸಿದೆಯೆಂದು ಹೇಳಿಕೆ ನೀಡಿದ್ದಾರೆ ಹಾಗೂ ನಿಶಾನೆ ಪಿ .16 ರ ಪ್ರಕಾರ ತದನುಸಾರವಾಗಿ ವರದಿಯನ್ನು ನೀಡಿದ್ದಾರೆ.

30. ಪ್ರಾ.ಸಾ .17, ಶಿವರಾಜು ಎಸ್. ಇವರು, ತಾನು ಹೊಸಕೋಟೆ ಪೊಲೀಸು ಠಾಣೆಯಲ್ಲಿ ಪೊಲೀಸು ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿರುವಾಗ ತಾನು ಪ್ರಕರಣವನ್ನು ದಾಖಲಿಸಿ, ಅಧಿಕಾರ ವ್ಯಾಪ್ತಿಯುಳ್ಳ ದಂಡಾಧಿಕಾರಿಯವರಿಗೆ ಮೊದಲ ಮಾಹಿತಿ ವರದಿಯನ್ನು ಕಳುಹಿಸಿರುವುದಾಗಿ ಹೇಳಿಕೆ ನೀಡಿದ್ದಾರೆ.

31. ಪ್ರಾ.ಸಾ .18, ಎಂ. ಮಲ್ಲೇಶ್, ಇವರು ಪ್ರಾ.ಸಾ .17 ರಿಂದ ಹೆಚ್ಚಿನ ತನಿಖೆಯನ್ನು ಕೈಗೊಂಡಿರುವ ಪೊಲೀಸು ನಿರೀಕ್ಷಕರಾಗಿದ್ದಾರೆ ಹಾಗೂ ತನಿಖಾಧಿಕಾರಿಯ ಮೂಲಕ ತನಿಖೆ ನಡೆಸಿದ ನಂತರ ಆಪಾದಿತನ ವಿರುದ್ಧ ಆರೋಪ ಪಟ್ಟಿಯನ್ನು ಇಟ್ಟಿದ್ದಾರೆ.

32. ವಾಸ್ತವವಾಗಿ ಪ್ರಾಸಿಕ್ಯೂಷನ್ನ ಸಂಪೂರ್ಣ ವಾದವು, ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯದ ಹಾಗೂ ಸನ್ನಿವೇಶದ ಸುತ್ತಲೂ ಗಿರಕಿ ಹೊಡೆಯುತ್ತಿದೆ, ಎಂದರೆ ಉದ್ದೇಶ, ಕಡೆಬಾರಿ ಕಂಡು ಬಂದ ಅನಿಸಿಕೆ ಹಾಗೂ ಆಪಾದಿತನ ಕೋರಿಕೆಯಂತೆ ಆಪಾದಿಸಲಾದ ಕೆಲವು ಸಲಕರಣೆಗಳನ್ನು ಪುನರ್ವಶಪಡಿಸಿಕೊಳ್ಳುವುದಾಗಿವೆ.ಪ್ರತ್ಯೇಕವಾಗಿ ಒಂದಾದ ಮೇಲೊಂದರಂತೆ ಸನ್ನಿವೇಶಗಳೊಂದಿಗೆ ವ್ಯವಹರಿಸಲು ನಾವು ಬಯಸಿಲ್ಲ.

33. ಉದ್ದೇಶ:ಪ್ರಾಸಿಕ್ಯೂಷನ್ ಪ್ರಕರಣದ ಘಟನೆಗಳ ಸನ್ನಿವೇಶವನ್ನು ನಾವು ನೋಡಿದರೆ, ಆಪಾದಿತನು ಮೃತನನ್ನು ಕೊಲ್ಲುವುದಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟವಾದ ಆರೋಪವಿರುವುದು ಸ್ಪಷ್ಟವಾಗುತ್ತದೆ.

34. ಮೃತ ಸುಲ್ತಾನನು ಸೈಯದ್ ಪಾಷಾನ ಮಗಳಾದ ಸಯೀದಾ ಕೌಸರ್ಳನ್ನು ಪ್ರೀತಿಸಲು ಆರಂಭಿಸಿದ್ದನು.ಸಯೀದಾ ಕೌಸರ್ಳ ಕುಟುಂಬ ಸದಸ್ಯರು ಅವಳಿಗೆ ವರನನ್ನು ಹುಡುಕುತ್ತಿದ್ದರು.ಆದುದರಿಂದ ಘಟನೆ ನಡೆದ ದಿನಾಂಕದಂದು, ಸಾಯಂಕಾಲ ಸುಮಾರು 4.30 ರಲ್ಲಿ ದೂರುದಾರ, ಅವನ ಪತ್ನಿಯ ತಂದೆ ಎಂದರೆ ಪ್ರಾ.ಸಾ .5 ಪರ್ವೀಜ್ ಪಾಷಾ ಹಾಗೂ ಸುಲ್ತಾನ್ನ ಮೂವರು ಸ್ನೇಹಿತರು ಹಾಗೂ ಪರ್ವಿಜ್ ಪಾಷಾನ ಚಿಕ್ಕಪ್ಪರೊಟ್ಟಿಗೆ ಸಯೀದಾ ಕೌಸರ್ಳ ಮನೆಗೆ ಹೋಗಿದ್ದು, ಮೃತ ಸುಲ್ತಾನನಿಗೆ ಅವಳನ್ನು ವಿವಾಹ ಮಾಡಿಕೊಡಬೇಕೆಂದು ಕೇಳಿದ್ದಾರೆ.ಆದರೆ, ಅವರು ಸುಲ್ತಾನನಿಗೆ ಅವಳನ್ನು ವಿವಾಹ ಮಾಡಿಕೊಡಲು ನಿರಾಕರಿಸಿದ್ದು, ಆ ಸಮಯದಲ್ಲಿ ಸಯೀದಾ ಕೌಸರ್ಳ ಸಹೋದರನು ಮನೆಯಿಂದ ಹೊರಗೆ ಬಂದು, ಸುಲ್ತಾನನಿಗೆ ಮದುವೆ ಮಾಡುವುದಕ್ಕೆ ಸಯೀದಾ ಕೌಸರ್ಳನ್ನು ಕೇಳಿಕೊಂಡು ತಮ್ಮ ಮನೆಗೆ ಮತ್ತೆ

ಬರಬಾರದೆಂದು, ಬಂದರೆ, ತಾನು ಸುಲ್ತಾನನನ್ನು ಒಂದು ಕೈ ನೋಡಿಕೊಳ್ಳುತ್ತೇನೆಂದು ಅವರಿಗೆ ಹೇಳಿದ್ದಾನೆ.ಇದಾದನಂತರ ಅದೇ ದಿನ ಸಾಯಂಕಾಲ ಆಪಾದಿತನು ಸದರಿ ಸುಲ್ತಾನನನ್ನು ಕರೆದೊಯ್ದಿದ್ದಾನೆ.

35. ಈ ಉದ್ದೇಶಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಪ್ರಾಸಿಕ್ಯೂಷನ್ನು, ಪಾಟ್ ಸವಾಲನ್ನು ನಡೆಸುತ್ತಿರುವ ಕ್ರಮದಲ್ಲಿ ಇದು ಸೂಚಿಸಿದರೂ ಕೂಡ ಪ್ರಾಸಿಕ್ಯೂಷನ್ನ ವಾದವನ್ನು ದೂರುದಾರ ಪರ್ವಿಜ್ ಪಾಷಾ ಪ್ರಾ.ಸಾ. ಇವನೇ ಬೆಂಬಲಿಸುವುದಿಲ್ಲ.ಇತರ ಸಾಕ್ಷಿದಾರರು ಯಾರೂ ಈ ನಿರ್ದಿಷ್ಟ ವಿಷಯದಲ್ಲಿ ಬೆಂಬಲಿಸುವುದಿಲ್ಲ.

36. ಮೃತನ ತಾಯಿ, ಪ್ರಾ.ಸಾ .9 ಅಶ್ರಫ್ ಉನ್ನೀಸಾ ಕೂಡ, ಈ ವಿಷಯಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಪ್ರತಿಕೂಲ ಸಾಕ್ಷ್ಯವಾಗಿ ಪರಿಣಮಿಸಿದ್ದಾಳೆ.ಪಾಟೀ ಸವಾಲು ಮುಂದುವರಿಯುತ್ತಿರುವಾಗಲೂ ಕೂಡ ಈ ಸಾಕ್ಷಿದಾರರ ಬಾಯಿಂದ ಯಾವುದೇ ವಿಷಯ ಹೊರಬಂದಿಲ್ಲ.ಹಾಗೆಯೇ ಮೃತನ ಸಹೋದರಿಯಾಗಿರುವ ಪ್ರಾ.ಸಾ .10, ರಿಜ್ವಾನಾ ಬಾನು, ಪ್ರತಿಕೂಲ ಸಾಕ್ಷ್ಯವಾಗಿ ಪರಿಣಮಿಸಿದ್ದು, ಈ ವಿಷಯಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಪ್ರಾಸಿಕ್ಯೂಷನನ್ನು ಸಮರ್ಥಿಸಿರುವುದಿಲ್ಲ.ಪ್ರಾ.ಸಾ .5, 9 ಹಾಗೂ 10 ಮೃತ ಸುಲ್ತಾನನ ಹತ್ತಿರದ ಸಂಬಂಧಿಗಳಾಗಿರುವ ಈ ಮೂವರು ಸಾಕ್ಷಿದಾರರು ಅವರಿಗೆ ತಿಳಿದಷ್ಟು ಮಟ್ಟಿಗೆ ಕೊಲೆಯ ಉದ್ದೇಶದ ಕಥೆಯನ್ನು ಸಮರ್ಥಿಸಿಲ್ಲ.

37, ಆದಾಗ್ಯೂ, ಮೃತನ ತಂದೆಯಾಗಿರುವ ಪ್ರಾ.ಸಾ .2 ಅಬ್ದುಲ್ ಖಾದರ್ ಈ ನಿರ್ದಿಷ್ಟ ವಿಷಯಕ್ಕೆ ಸ್ವಲ್ಪಮಟ್ಟಿಗೆ ಬೆಂಬಲಿಸಬೇಕು, ಆದರೆ ಅವನು, ಘಟನೆಯ ದಿನದಂದು ಆಪಾದಿತನ ಮನೆಗೆ ತಾವು ಹೋಗಿದ್ದೆವೆಂದು, ಮೃತ ಸುಲ್ತಾನನಿಗೆ ವಿವಾಹ ಮಾಡಲು ಸಯೀದಾ ಕೌಸರಳನ್ನು ಕೊಡಬೇಕೆಂದು ಕೇಳುವ ಸಲುವಾಗಿ ಹೋಗಿದ್ದೆವೆಂದು ಹೇಳಿಕೆ ನೀಡಿದ್ದಾನೆ.ಆ ಸಮಯದಲ್ಲಿ ಮನೆಯಲ್ಲಿದ್ದ ಆಪಾದಿತ ಹಾಗೂ ಅವನ ತಂದೆ, ಅವರು, ಈಗಾಗಲೇ ಮತ್ತೊಬ್ಬ ವ್ಯಕ್ತಿಗೆ ಸಯೀದಾ ಕೌಸರ್ಳನ್ನು ವಿವಾಹ ಮಾಡುವ ಸಲುವಾಗಿ ಭರವಸೆ ನೀಡಿದ್ದೇವೆಂದು ಹೇಳಿದ್ದಾರೆ.ಆದುದರಿಂದ ಅವರು ಪ್ರಾ.ಸಾ .2 ಹಾಗೂ ಇತರರು ಮಾಡಿದ ಪ್ರಸ್ತಾವವನ್ನು ತಿರಸ್ಕರಿಸಿದರೆಂದು ತಿಳಿಸಿದ್ದಾನೆ.

38. ಮೃತನ ತಂದೆಯ ಮೇಲಿನ ಸದರಿ ಸಾಕ್ಷ್ಯವನ್ನು ಹೊರತುಪಡಿಸಿದರೆ, ಈ ಪ್ರೇರಿತ ಸಂಗತಿಗೆ ಸಂಬಂಧಪಡುವಷ್ಟರಮಟ್ಟಿಗೆ ಯಾವುದೇ ಇತರ ಸಾಕ್ಷ್ಯಾಧಾರ ಲಭ್ಯವಾಗಿರುವುದಿಲ್ಲ.ಅಷ್ಟೇ ಅಲ್ಲದೆ, ಅದರ ಜೊತೆಗೆ ಮೃತನ ಹತ್ತಿರದ ಬಂಧು-ಬಳಗದವರು, ತಾಯಿ, ಸಹೋದರಿ ಹಾಗೂ ಬ್ರದರ್ ಇನ್ ಲಾ (ಮಾಮ) ಈ ಸಂಬಂಧದಲ್ಲಿ ಪ್ರಾ.ಸಾ .2 ರ ಸಾಕ್ಷ್ಯವನ್ನು ಸಮರ್ಥಿಸಿಲ್ಲ.ಈ ವಿಷಯಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಪಾಟಿ ಸವಾಲು ನಡೆಯುವಲ್ಲಿ ಪ್ರಾ.ಸಾ.2 ಕ್ಕೆ ಸೂಚಿಸಿದ್ದರಾದರೂ ಅವನು, ಪೊಲೀಸು ಠಾಣೆಯ ಮುಂದೆ ಅವನು ಹೇಳಿಕೆಯನ್ನು ನೀಡುತ್ತಿದ್ದಾಗ, ಪೊಲೀಸರ ಮುಂದೆ ಈ ಎಲ್ಲಾ ವಿಷಯಗಳನ್ನು ತಿಳಿಸಿಲ್ಲ.ಆದುದರಿಂದ, ಈ ನ್ಯಾಯಾಲಯದ ಮುಂದೆ ಪ್ರಾ.ಸಾ .2 ರಲ್ಲಿ ಸುಧಾರಣೆಯಾಗಿದೆ.

39. ಈ ಸಂಬಂಧದಲ್ಲಿ, ಪ್ರಾ.ಸಾ .18 ಎಂ. ಮಲ್ಲೇಶ್, ತನಿಖಾಧಿಕಾರಿ ಇವರು, ತಾನು ಈ ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸಿದ್ದೇನೆಂದು ಹೇಳಿದ್ದಾರೆ.ಈ ಸಾಕ್ಷಿದಾರರ ಪಾಟೀ ಸವಾಲು ನಡೆಯುತ್ತಿರುವಾಗ, ಇದನ್ನು ಹೊರಗೆಡಹಿದ್ದು, ಕಂಡಿಕೆ 26 ರಲ್ಲಿ ಹೀಗಿದೆ-

" XXXXXXX ಪ್ರಾ.ಸಾ .2 ತನ್ನ ಮುಂದೆ ಅವನ ಹೇಳಿಕೆಯನ್ನು ನೀಡಿಲ್ಲವೆಂದು, ಅವರು, ವಧುವನ್ನು ಕೇಳಲು ಹೋಗಿದ್ದಾಗ, ಆ ಸಮಯದಲ್ಲಿ, ಆಪಾದಿತನು ಮನೆಯಲ್ಲಿ ಇದ್ದನೆಂದು ಹಾಗೂ ಅವನು ನನ್ನನ್ನು ಪರಿಚಯ ಮಾಡಿಕೊಂಡನೆಂದೂ ಹಾಗೂ ಆಪಾದಿತನು ಯಾಕೆ ನೀವು ನಿಮ್ಮ ಮಗನಿಗೆ ವಿವಾಹ ಮಾಡಿಕೊಡಲು ನನ್ನ ಸಹೋದರಿಯನ್ನು ಕೇಳುತ್ತಿರುತ್ತಿರುವಿರಿ ಎಂಬ ಬಗ್ಗೆ ಖುದ್ದಾಗಿ ನನ್ನನ್ನು ಪ್ರಶ್ನಿಸಿದನೆಂಬುದನ್ನು ಸೂಚಿಸಿರುವುದು ಸತ್ಯವಾದುದಾಗಿದೆ.

ಆದುದರಿಂದ, ಈ ನಿರ್ದಿಷ್ಟ ವಿಷಯವು ಸುಧಾರಿಸಿದೆಯೆಂದು ರುಜುವಾತಾಗಿದೆ ಹಾಗೂ ಇದನ್ನು, ಆತನು ಪೊಲೀಸರ ಮುಂದೆ ತಿಳಿಸಿಲ್ಲವೆಂಬುದನ್ನು ಪ್ರಾ.ಸಾ .2 ಕ್ಕೆ ಇದನ್ನು ಸೂಚಿಸಲಾಗಿದ್ದು, ತನಿಖಾಧಿಕಾರಿಯು ಸಹ ಇದನ್ನು ದೃಢಪಡಿಸಿದ್ದಾರೆ.ಆದುದರಿಂದ, ಮೇಲೆ ಸೂಚಿಸಲಾದ ಮೃತನ ಇತರ ಸಂಬಂಧಿಕರ ಅಥವಾ ಪ್ರಾ.ಸಾ.2 ರ ಸಾಕ್ಷ್ಯವು ಈ ಪ್ರೇರಕ ಸಂಗತಿಯನ್ನು ಸಮರ್ಥಿಸಿಲ್ಲ, ಅಷ್ಟೇ ಅಲ್ಲದೆ, ನ್ಯಾಯಾಲಯದ ಮುಂದೆ ಅವನ ಸಾಕ್ಷ್ಯ ಲ್ಯು ನಡೆಯುವ ಅವಧಿಯಲ್ಲಿ ಪ್ರಾ.ಸಾ .2 ಸುಧಾರಿಸಿರುವುದು ರುಜುವಾತಾಗಿದೆ.ಅಷ್ಟೇ ಅಲ್ಲದೆ, ಸಯೀದಾ ಕೌಸರಳ ತಂದೆಯು, ಮೃತ ಸುಲ್ತಾನನಿಗೆ ತನ್ನ ಮಗಳನ್ನು ವಿವಾಹ ಮಾಡಿಕೊಡುವುದನ್ನು

ನಿರಾಕರಿಸಿದ ನಂತರ ಅವರ ಮನೆಯಲ್ಲಿ ಯಾವುದೇ ರೀತಿಯ ಜಗಳವಾಗಿದೆಯೆಂಬುದನ್ನು ತೋರಿಸಲು ಯಾವುದೇ ಸಾಕ್ಷ್ಯಾಧಾರ ಇಲ್ಲ. ಸದರಿ ಉದ್ದೇಶಿತ ಆಪಾದಿತ ಘಟನೆಯು ನಡೆದಿದೆಯೆಂದು ಹೇಳಲಾಗುವ ಮುಂಚೆಯಾಗಲಿ ಅಥವಾ ನಂತರವಾಗಲಿ ಯಾವುದೇ ಸಮಯದಲ್ಲಿ ಆಪಾದಿತನ ಯಾವುದೇ ಅಸಹಜ ನಡವಳಿಕೆಯ ಆಪಾದನೆ ಎಲ್ಲಿಯೂ ಇಲ್ಲ. ಆದುದರಿಂದ ನಮ್ಮ ಅಭಿಪ್ರಾಯದಲ್ಲಿ, ಪ್ರಾಸಿಕ್ಯೂಷನ್ನು ಬಿಂಬಿಸಿರುವ ಉದ್ದೇಶ ತುಂಬಾ ಹುರುಳಿಲ್ಲದ್ದಾಗಿದೆ.

40. ಕಡೆಯದಾಗಿ ನೋಡಿದ ಸನ್ನಿವೇಶ:ಖಂಡಿತವಾಗಿ, ಉದ್ದೇಶವನ್ನು ರುಜುವಾತುಪಡಿಸದಿರುವುದೊಂದೇ, ಪ್ರಾಸಿಕ್ಯೂಷನ್ನ ವಾದವನ್ನು ಸಂಪೂರ್ಣವಾಗಿ ನಿರಾಕರಿಸಲು ಸಾಕಾಗುವುದಿಲ್ಲ.ಇತರ ಸನ್ನಿವೇಶ ಹಾಗೂ ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯ, ಸಂದೇಹವನ್ನು ಮೀರಿ ರುಜುವಾತುಪಡಿಸುವುದು ಏನಾದರೂ ಇದ್ದರೆ ಅದನ್ನು, ನ್ಯಾಯಾಲಯವು, ಆಪಾದಿತನ ಅಪರಾಧ ನಿರ್ಣಯ ಮಾಡಲು ಅದಕ್ಕೆ ಅವಕಾಶವಿರುತ್ತದೆ.

41. ಆ ದಿನದಂದು ಪ್ರಾ.ಸಾ .5 ಹಾಗೂ ಪ್ರಾ.ಸಾ .2 ಆಪಾದಿತನ ಮನೆಯಲ್ಲಿ, ವಧುವಿಗಾಗಿ ಕೋರಿದ್ದು, ಅದೇ ದಿನದಂದು ಸಾಯಂಕಾಲ ಆಪಾದಿತನು ಮೃತನ ಮನೆಗೆ ಬಂದಿದ್ದು, ಮೃತನನ್ನು ತನ್ನ ಮೋಟಾರು ಬೈಕಿನಲ್ಲಿ ಅವನೊಂದಿಗೆ ಕರೆದೊಯ್ದಿದ್ದಾನೆ.ತದನಂತರ ಮೃತನು ಹಿಂತಿರುಗಿಲ್ಲ ಎಂಬುದು ಪ್ರಾಸಿಕ್ಯೂಷನ್ನ ವಾದವಾಗಿದೆ.ರಾತ್ರಿ ಸುಮಾರು 9.45 ರಲ್ಲಿ ಪ್ರಾ.ಸಾ .2 ಇವರಿಗೆ ನೂರ್ಪಾಷಾ ಎಂಬೊಬ್ಬನು, ಮೃತನನ್ನು ಸಾಯಿಸಲಾಗುತ್ತಿದೆಯೆಂಬ ಮಾಹಿತಿಯನ್ನು ಸ್ವೀಕರಿಸಿದ್ದಾನೆ.ಇದಾದ ನಂತರ ಪ್ರಾ.ಸಾ .2 ಸ್ಥಳಕ್ಕೆ ಧಾವಿಸಿದ್ದು, ಮೃತದೇಹವನ್ನು ನೋಡಿದ್ದಾನೆ.ಅವನ ಪಾಟೀ ಸವಾಲು ನಡೆಯುವ ಸಮಯದಲ್ಲಿ ಈ ಸಂಗತಿಯನ್ನು ನಿರಾಕರಿಸಿದ್ದಾನೆ ಹಾಗೂ ಪೊಲೀಸರ ಮುಂದೆ ಹೇಳಿದ್ದ ಅವನ ಮೊದಲಿನ ಹೇಳಿಕೆಯಲ್ಲಿ ಮೃತನೊಂದಿಗೆ ಆಪಾದಿತನನ್ನು ಕಡೆಯದಾಗಿ ನೋಡಿರುವ ಮೇಲಿನ ಸದರಿ ಹೇಳಿಕೆಯನ್ನು ತಾನು ಹೇಳಿಲ್ಲವೆಂದು ಸೂಚಿಸಿದ್ದಾನೆ ಮತ್ತೆ ಪ್ರಾ.ಸಾ .18 ರ ಪಾಟೀ ಸವಾಲನ್ನು ನಡೆಸುವ ಅವಧಿಯಲ್ಲಿ ಇದು ರುಜುವಾತಾಗಿರುವ ಸುಧಾರಣೆ ಕಂಡುಬಂದಿದೆ.ಪ್ರಾ.ಸಾ .18 ಕೂಡ, ಪ್ರಾ.ಸಾ .2 ಕೂಡ ಅವನ ಹೇಳಿಕೆಯಲ್ಲಿ ಆತನ ಮುಂದೆ ' ಆಪಾದಿತನು ಆ ದಿನದಂದು ಮೃತನನ್ನು ಊಟ ಮುಗಿಸಿದ ನಂತರ ಆಚೆ ಬರಲು ಹೇಳಿದನೆಂದು, ಅದರಂತೆ ಮೃತನು ಐದು ನಿಮಿಷದಲ್ಲಿ ಹಿಂತಿರುಗಿ ಬರುವೆನೆಂದು ಹೇಳಿ ಹೋದನು ' ಎಂಬುದನ್ನು, ತಾನು ಹೇಳಿಲ್ಲವೆಂದು ಪ್ರಾ.ಸಾ .2 ಹೇಳಿಕೆ ನೀಡಿದ್ದಾನೆ, ಅಷ್ಟೇ ಅಲ್ಲದೆ, ಪ್ರಾ.ಸಾ .2, ತನ್ನ ನಾದಿನಿಯು ಸುಮಾರು ರಾತ್ರಿ 11 ಗಂಟೆ ಸಮಯದಲ್ಲಿ ಮೃತನನ್ನು ಹೊಡೆದು ಸಾಯಿಸುತ್ತಿರುವುದನ್ನು ಅವನಿಗೆ ತಿಳಿಸಿದ್ದು ಆಗ ಸ್ಥಳಕ್ಕೆ ತಾನು ಹೋದೆನೆಂಬುದನ್ನು ಹಾಗೂ ಮೃತದೇಹವು ಅಲ್ಲಿ ಬಿದ್ದಿರುವುದನ್ನು ನೋಡಿದೆನೆಂಬುದನ್ನೂ ಕೂಡ ಪ್ರಾ.ಸಾ .2 ಹೇಳಿಲ್ಲ.ಪಾಟೀ ಸವಾಲು ನಡೆಯುವ ಸಮಯದಲ್ಲೂ ಕೂಡ, ಅವನು ಆ ದಿನದಂದು, ಆ ಸಮಯದಲ್ಲಿ ಸ್ಥಳಕ್ಕೆ ಹೋದಾಗ ಪೊಲೀಸರು ಈ ಮನುಷ್ಯನನ್ನು ವಿಚಾರಣೆ ಮಾಡಿದ್ದಾರೆ, ಆದರೆ ಅವನು, ಆ ನಿರ್ದಿಷ್ಟ ಸಮಯದಲ್ಲಿ ಪೊಲೀಸರಿಗೆ ಏನನ್ನೂ ಹೇಳಿರಲಿಲ್ಲ ಎಂಬುದನ್ನು ಒಪ್ಪಿಕೊಂಡಿದ್ದಾನೆ.ಹೀಗಾಗಿ ಆಪಾದಿತನು, ತನ್ನೊಂದಿಗೆ ಮೃತನನ್ನು ಕೊಂಡೊಯ್ದನೆಂಬ ಬಗ್ಗೆ ಕಡೆಯದಾಗಿ ನೋಡಿದ ಸನ್ನಿವೇಶಕ್ಕೆ ಸಂಬಂಧಪಟ್ಟಂತೆ ಕೆಲವು, ದೃಢವಾಗಿಲ್ಲದ ಸಾಕ್ಷ್ಯ ಎಣಿ ಲಭ್ಯವಾಗಿವೆ.

42. ಈ ಸಂಬಂಧದಲ್ಲಿ ಪ್ರಾ.ಸಾ .9 ರ ಸಾಕ್ಷ್ಯವು, ಪ್ರಾ.ಸಾ .2 ರ ಸಾಕ್ಷ್ಯಕ್ಕೆ ವಿರುದ್ಧವಾಗಿದೆ.ಪ್ರಾ.ಸಾ .9 ಮೃತ ಸುಲ್ತಾನನ ತಾಯಿಯಾಗಿದ್ದಾಳೆ.ವಾಸ್ತವವಾಗಿ, ಅವಳು ಪ್ರಾಸಿಕ್ಯೂಷನ್ಗೆ ಪ್ರತಿಕೂಲ ಸಾಕ್ಷ್ಯವಾಗಿ ಪರಿಣಮಿಸಿದ್ದಾಳೆ.ಆಪಾದಿತನು, ಆ ನಿರ್ದಿಷ್ಟ ದಿನದಂದು ರಾತ್ರಿ ಸುಮಾರು 8 ಗಂಟೆಗೆ ಈ ಸಾಕ್ಷಿದಾರರ ಮನೆಗೆ ಬಂದಿದ್ದು, ತನ್ನ ಮೋಟಾರು ಸೈಕಲ್ನಲ್ಲಿ ಅವನೊಟ್ಟಿಗೆ ಮೃತನನ್ನು ಕರೆದುಕೊಂಡು ಹೋಗಿದ್ದಾನೆ.ತದನಂತರ, ಮೃತನು ಸಾವನ್ನಪ್ಪಿದಾಗ ರಾತ್ರಿ ಸುಮಾರು 9.45 ಆಗಿರುವುದು ಅವರಿಗೆ ತಿಳಿದುಬಂದಿದೆಯೆಂಬುದು ಪ್ರಾಸಿಕ್ಯೂಷನ್ನಿನ ಪಾಟಿ ಸವಾಲಿನ ಅವಧಿಯಲ್ಲಿ ಸೂಚಿತವಾಗಿದೆ.ಅವಳು, ತಾನು ಪೊಲೀಸರ ಮುಂದೆ ಅಂಥ ಹೇಳಿಕೆಯನ್ನು ನೀಡಿರಲಿಲ್ಲವೆಂದು ಹೇಳಿರುವುದನ್ನು ಪಾಟಿ ಸವಾಲಿನ ಅವಧಿಯಲ್ಲಿ ಈ ಸೂಚನೆಯನ್ನು ನಿರಾಕರಿಸಿದ್ದಾಳೆ.

43. ಅಂತೆಯೇ, ಪ್ರಾ.ಸಾ .10 ಮೃತರ ತಂಗಿಯಲ್ಲದೆ ಬೇರಾರು ಅಲ್ಲ, ನಿರ್ದಿಷ್ಟ ದಿನದಂದು ಮೃತನನ್ನು ಆಪಾದಿತನು ಕರೆದುಕೊಂಡು ಹೋಗಿರುವ ಬಗ್ಗೆ ಏನನ್ನೂ ತಿಳಿಸಿಲ್ಲ.ಪಾಟಿ ಸವಾಲಿನ ಅವಧಿಯಲ್ಲಿ ಅದೇ ರೀತಿಯಲ್ಲಿ ಅವಳಿಗೂ ಕೂಡ ಸೂಚಿಸಲಾಗಿದೆ.ಆದರೆ, ಅವಳು ಪೊಲೀಸರ ಮುಂದೆ ಅಂಥ ಹೇಳಿಕೆಯನ್ನು ನೀಡಿರುವುದನ್ನು ನಿರಾಕರಿಸಿದ್ದಾಳೆ.

44. ಆದುದರಿಂದ, ಮೃತನನ್ನು ಆಪಾದಿತನು ಕರೆದುಕೊಂಡು ಹೋದಾಗ, ಅವರಿಗೆ ಮನೆಯಲ್ಲಿದ್ದರೆಂದು ಹೇಳಲಾಗಿರುವ ಮೂರು ಜನ ಸಾಕ್ಷಿದಾರರು ಪ್ರಾಸಿಕ್ಯೂಷನ್ನ ವಾದವನ್ನು ಇವರು ಸಮರ್ಥಿಸಿಲ್ಲ, ಸಾಕ್ಷ್ಯ ಎ ಅಸ್ಥಿರವಾಗಿರುವವರಲ್ಲಿ ಪ್ರಾ.ಸಾ .2 ನ್ನು ಹೊರತುಪಡಿಸಿದರೆ ಪ್ರಾಸಿಕ್ಯೂಷನ್ನ ವಾದವನ್ನು ಸಮರ್ಥಿಸಿರುವುದಿಲ್ಲ ಹಾಗೂ ಸದರಿ ಸಾಕ್ಷ್ಯವು ಸುಧಾರಿಸಿರುವುದು ಕಂಡುಬರುತ್ತದೆ.ಆದುದರಿಂದ ನಮ್ಮ ಅಭಿಪ್ರಾಯದಲ್ಲಿ, ಈ ನಿರ್ದಿಷ್ಟ ಸನ್ನಿವೇಶವನ್ನು ಪ್ರಾಸಿಕ್ಯೂಷನ್ನು ಸರಿಯಾಗಿ ರುಜುವಾತುಪಡಿಸಲಾಗಿಲ್ಲ.

45. ನಾವು ಪ್ರಾಸಿಕ್ಯೂಷನ್ನ ಪ್ರಮುಖ ಹಾಗೂ ಪ್ರಾಧಾನ್ಯವಾದ ಸಾಕ್ಷ್ಯ ಎಲಾ ಎನ್ನುವ ಪ್ರತ್ಯಕ್ಷ ಸಾಕ್ಷಿದಾರರ ಕಡೆಗೆ ಗಮನಹರಿಸಿದ್ದೇವೆ.ಯಾವುದೇ ಇತರ ಸನ್ನಿವೇಶವನ್ನು ಸಾ ಂ ದರ್ಭಿಕವಾಗಿ ಅ ಂ ಥ ಸ ಂ ಬ ಂ ಧಿಸಿದುದನ್ನು ರುಜುವಾತುಪಡಿಸುವಲ್ಲಿ, ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯವನ್ನು ಅಂಗೀಕರಿಸುವಲ್ಲಿ ನಂಬಲರ್ಹ ಅಥವಾ ನಂಬಿಕಾರ್ಹವಾಗಿದ್ದರೆ, ನ್ಯಾಯಾಲಯವು ಏಕಮಾತ್ರವಾಗಿ ಅಂಥ ಸಾಕ್ಷ್ಯವನ್ನು ಅವಲ ಂ ಬಿಸಿ ಪ್ರಾಸಿಕ್ಯೂಷನ್ ವಾದವನ್ನು ರುಜುವಾತುಪಡಿಸಿದೆಯೆಂದು ಅಭಿಪ್ರಾಯಪಡುತ್ತದೆ.ಈ ಹಿನ್ನೆಲೆಯಲ್ಲಿ ನಾವು ಈಗ ಪ್ರಾ.ಸಾ .4 ರ ಸಾಕ್ಷ್ಯವನ್ನು ಚರ್ಚಿಸೋಣ.

46. ಪ್ರತ್ಯಕ್ಷ ಸಾಕ್ಷಿದಾರರ ಆವೃತ್ತಿ:ನಾವು ಈಗಾಗಲೇ ವಿವರಿಸಲಾದಂತೆ, ಇಡೀ ವಾದವು ಘಟನೆಯ ಪ್ರತ್ಯಕ್ಷ ಸಾಕ್ಷಿದಾರರ ಮೇಲೆ ಎಂದರೆ ಪ್ರಾ.ಸಾ .4 ಹಾಗೂ ವಶಪಡಿಸಿಕೊಂಡಿರುವುದರ ಮೇಲೆ ನಿಂತಿದೆ.ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಪ್ರಾ.ಸಾ .4 ಹಾಗೂ ಶ್ರೀಮತಿ ಜಯಲಕ್ಷ್ಮಿ ಎ್ರ ಎಂಬೊಬ್ಬರು ಘಟನೆಗೆ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದಾರೆಂದು ಪ್ರಯತ್ನಪೂರ್ವಕವಾಗಿ ವಾದಿಸಿದ್ದಾರೆ.ಆದರೆ ಸದರಿ ಶ್ರೀಮತಿ ಜಯಲಕ್ಷ್ಮಿಯನ್ನು ವಿಚಾರಣೆ ಮಾಡಲಾಗಿಲ್ಲ.ಆ ಸಂದರ್ಭದಲ್ಲಿ ಪ್ರಾ.ಸಾ .4 ರ ಸಾಕ್ಷ್ಯವನ್ನು, ಇವರನ್ನು ಪ್ರತ್ಯಕ್ಷ ಸಾಕ್ಷ್ಯವೆಂದು ಭಾವಿಸಬಹುದೇ ಅಥವಾ ಇಲ್ಲವೇ ಹಾಗೂ ಪ್ರಾಸಿಕ್ಯೂಷನ್ನು ಅವನ ಸಾಕ್ಷ್ಯವನ್ನು ನಂಬಬಹುದೇ ಅಥವಾ ಇಲ್ಲವೇ ಎಂಬ ಸನ್ನಿವೇಶವನ್ನು ಸುತ್ತುವರಿದುಕೊಂಡೇ ವಿಚಾರಣೆ ಮಾಡಬೇಕಾಗುತ್ತದೆ.

47. ಅಂತೆಯೇ, ಈ ಪ್ರಕರಣದಲ್ಲಿ ಇಡೀವಾದವು, ಏಕಮಾತ್ರ ಪ್ರತ್ಯಕ್ಷ ಸಾಕ್ಷ್ಯ ಎ 4 ನಾಗಪ್ಪನ ಸುತ್ತ ಸುತ್ತುತ್ತದೆ.ಪ್ರಾಸಿಕ್ಯೂಷನ್ನು ಏಕಮಾತ್ರ ಪ್ರತ್ಯಕ್ಷ ಸಾಕ್ಷಿದಾರನನ್ನು ಅವಲಂಬಿಸಿದ್ದಾಗ, ನ್ಯಾಯಾಲಯವು ಏನನ್ನು ಅನುಸರಿಸಬೇಕು.ಆ ಎಲ್ಲಾ ತತ್ವಗಳಾವುವು ಎಂಬುದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

48. ಜಯರಾಮ್ ಶಿವ ಟ್ಯಾಗೋರ್ ಹಾಗೂ ಇತರರು -ವಿರುದ್ಧ ಮಹಾರಾಷ್ಟ್ರ ರಾಜ್ಯ - 1991 (ಎಸ್ಯುಪಿಪಿ .2) ಎಸ್ಸಿಸಿ 677' ನಿರ್ಣಯದಲ್ಲಿ ಸರ್ವೋಚ್ಚ ನ್ಯಾಯಾಲಯವು ಹೀಗೆ ಚ ಅಭಿಪ್ರಾಯಪಟ್ಟಿದೆ

"ಏಕಮಾತ್ರ ಪ್ರತ್ಯಕ್ಷ ಸಾಕ್ಷಿದಾರನ ಸಾಕ್ಷ್ಯವನ್ನು ಆಧರಿಸಿದ ಅಪರಾಧ ನಿರ್ಣಯವು ಅನುಮತೀಯವಾದುದಾಗಿದೆ, ಆದರೆ, ಎಚ್ಚರಿಕೆಯ ನಿಯಮವನ್ನು ಅನುಸರಿಸಬೇಕಾಗುತ್ತದೆ.ಆದಾಗ್ಯೂ, ಸಣ್ಣಪುಟ್ಟ ವ್ಯತ್ಯಾಸಗಳು ಪ್ರಾಸಿಕ್ಯೂಷನ್ ವಾದಕ್ಕೆ ಅವಶ್ಯಕವಲ್ಲ.೨) ಪ್ರಾಸಿಕ್ಯೂಷನ್ನು ಪ್ರತ್ಯಕ್ಷ ಸಾಕ್ಷಿದಾರರ ಏಕಮಾತ್ರ ಸಾಕ್ಷ್ಯದ ಮೇಲೆ ನಿಂತಿದ್ದರೆ ಅದನ್ನು ಸಂಪೂರ್ಣವಾಗಿ ನಂಬಬೇಕು.ಆದಾಗ್ಯೂ, ಹಾಗೆಂದ ಮಾತ್ರಕ್ಕೆ ಪ್ರತಿಯೊಂದು ಹಾಗೂ ಪ್ರತೀ ಅಸ್ಥಿರತೆ ಅಥವಾ ಸಣ್ಣ ವ್ಯತ್ಯಾಸಗಳು ಅಂಥ ಸಾಕ್ಷಿದಾರನನ್ನು ನಂಬಲರ್ಹವಲ್ಲವೆನ್ನುವ ಸಾಕ್ಷ್ಯವನ್ನು ನೀಡಿರಬಹುದು.ಆದುದರಿಂದ, ಸಂಗತಿಗಳ ಮೇಲೆ ನ್ಯಾಯಾಲಯವು, ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯವನ್ನು ಎಚ್ಚರಿಕೆಯಿಂದ ವಿಚಾರಣೆ ಮಾಡಬೇಕಾಗುತ್ತದೆ ಹಾಗೂ ಪ್ರಾಸಿಕ್ಯೂಷನ್ನ ವಾದವನ್ನು ಒಟ್ಟಾರೆಯಾಗಿ ಬುಡಮೇಲು ಮಾಡಲು ಸಾಕಷ್ಟು ಅಪಾಯಮಾಡುವ ಗಂಭೀರ ಅಸ್ಥಿರತೆಯಿಲ್ಲವೆಂಬುದನ್ನು ಇದು ಗುರುತಿಸುತ್ತದೆ.ಆಗ ನ್ಯಾಯಾಲಯವು, ಅಂಥ ಏಕಮಾತ್ರ ಪ್ರತ್ಯಕ್ಷ ಸಾಕ್ಷಿದಾರನನ್ನು ಅವಲಂಬಿಸುತ್ತದೆ ಹಾಗೂ ಅಪರಾಧ ನಿರ್ಣಯವನ್ನು ದಾಖಲಿಸುತ್ತದೆ. "

49. ಇಂದರ್ ಸಿಂಗ್ ಹಾಗೂ ಇತರರು -ವಿರುದ್ಧ ರಾಜಸ್ಥಾನ ರಾಜ್ಯ – (2015) 2 ಎಸ್.ಸಿ.ಸಿ. 734 ಮತ್ತೊಂದು ತೀರ್ಪಿನಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು, ಮಾಸ -ವಿರುದ್ಧ ಚ ಉತ್ತರ ಪ್ರದೇಶ ರಾಜ್ಯ ಪ್ರಕರಣದ ತೀರ್ಪನ್ನು ಅವಲಂಬಿಸಿದ ನಂತರ ವಾಸ್ತವವಾಗಿ, ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಪರಿಗಣಿಸಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

"ಇತರ ಪ್ರತ್ಯೇಕ ಪ್ರತ್ಯಕ್ಷ ಸಾಕ್ಷಿದಾರರು ಪ್ರಾಸಿಕ್ಯೂಷನ್ಗೆ ಪ್ರತಿಕೂಲವಾಗಿ ಪರಿಣಮಿಸಿದರೂ ಕೂಡ ಏಕಮಾತ್ರ ಪ್ರತ್ಯಕ್ಷ ಸಾಕ್ಷಿದಾರನನ್ನು ಅವಲಂಬಿಸಬಹುದು.ಆದರೆ ಪ್ರತ್ಯಕ್ಷ ಸಾಕ್ಷಿದಾರನ ಏಕಮಾತ್ರ ಸಾಕ್ಷ್ಯಧಾರವು

ಅಂಗೀಕಾರಕ್ಕೆ ವಿಶ್ವಾಸಾರ್ಹ ಹಾಗೂ ನ ಂ ಬಿಕಾರ್ಹವಾದುದಾಗಿದೆ. ಸಾಕ್ಷಿದಾರನ ಏಕಮಾತ್ರ ಸಾಕ್ಷ್ಯಾಧಾರವನ್ನು ಅವಲಂಬಿಸಲು ಸಾಧ್ಯವಿಲ್ಲ ಎನ್ನುವ ಕಠಿಣ ಹಾಗೂ ಬಿಗಿಯಾದ ನಿಯಮವಿಲ್ಲ."

50. ಅಧಿವಿಚಾರಣಾ ನ್ಯಾಯಾಲಯವು, ವಾಸ್ತವವಾಗಿ, ಅವನನ್ನು ಪ್ರತ್ಯಕ್ಷ ಸಾಕ್ಷಿದಾರನೆಂದು ಪರಿಗಣಿಸಿಲ್ಲ, ಆದರೆ, ಆಪಾದಿತನು, ಮೃತನ ಎದೆಯ ಮೇಲೆ ಕುಳಿತು ಕತ್ತಿಯನ್ನು ತೆಗೆಯಲು (ಲಾಂಗ್) ಆಪಾದಿತನು ಪ್ರಯತ್ನಿಸುತ್ತಿರುವುದನ್ನು ನೋಡಿರುವುದಕ್ಕೆ ಇವನು ಸಾಂದರ್ಭಿಕ ಸಾಕ್ಷಿದಾರನಾಗಿದ್ದಾನೆ.ಆದರೆ, ವಾಸ್ತವವಾಗಿ, ಆಪಾದಿತನು ಮೃತನನ್ನು ಥಳಿಸುವುದನ್ನು ನೋಡಿಲ್ಲ.ಆದಾಗ್ಯೂ ಅಧಿವಿಚಾರಣಾ ನ್ಯಾಯಾಲಯವು, ಪ್ರಾ.ಸಾ .4 ರ ಸಾಕ್ಷ್ಯವನ್ನು ವ್ಯಾಪಕವಾಗಿ ಅವಲಂಬಿಸಿದ್ದು, ಅವನು ವಾಸ್ತವವಾಗಿ ಆ ದಿನದಂದು ಆಪಾದಿತ ಹಾಗೂ ಮೃತನನ್ನು ನೋಡಿದ್ದನೆಂದೂ, ಆಪಾದಿತನು ಮೃತನ ಎದೆಯ ಮೇಲೆ ಕುಳಿತಿರುವುದನ್ನು ನೋಡಿರುವನೆಂದು ಅಭಿಪ್ರಾಯಪಟ್ಟಿದೆ.ಅದಕ್ಕೋಸ್ಕರ ಅಧಿವಿಚಾರಣಾ ನ್ಯಾಯಾಲಯವು ಪ್ರಾ.ಸಾ .4 ರ ಆವೃತ್ತಿಯನ್ನು ನಂಬಿಕೊಂಡಿದೆ.

51. ಪ್ರಾ.ಸಾ .4 ನಿರ್ದಿಷ್ಟವಾಗಿ, ತನ್ನ ಸಾಕ್ಷದಲ್ಲಿ, ಘಟನೆ ನಡೆದ ದಿನಾಂಕದಂದು, ರಾತ್ರಿ ಸುಮಾರು 8.30 ಅಥವಾ 9.00 ಗಂಟೆಯಲ್ಲಿ ಅವನು, ಪ್ರಥಮ ದರ್ಜೆ ಕಾಲೇಜಿನ ಬಳಿಯಿರುವ ತನ್ನ ಮನೆಯಲ್ಲಿದ್ದನು ಸದರಿ ಪ್ರಥಮ ದರ್ಜೆ ಕಾಲೇಜಿನ ಆಟದ ಮೈದಾನದಲ್ಲಿ ಘಟನೆ ನಡೆದಿರುವುದಾಗಿ ತಿಳಿಸಿದ್ದಾನೆ.ಆ ಸಮಯದಲ್ಲಿ ಅವನ ನೆರೆಹೊರೆಯವಳಾದ ಜಯಲಕ್ಷ್ಮಿಯು ಈ ಮನುಷ್ಯನನ್ನು ಕರೆದು, ಕಾಲೇಜಿನ ಬಳಿ ಏನೋ ಗಲಾಟೆ ನಡೆಯುತ್ತಿದೆಯೆಂದು ತಿಳಿಸಿದ್ದಾಳೆ.ಸದರಿ ಮಾಹಿತಿಯನ್ನು ಸ್ವೀಕರಿಸಿದ ನಂತರ ಅವನು ಸದರಿ ಕಾಲೇಜಿನ ಕಾಂಪೌಂಡಿನ ಬಳಿ ಹೋಗಿದ್ದಾನೆ.ಸದರಿ ಕಾಂಪೌಂಡ್ ಗೋಡೆಯ ಬಳಿ ಬೀದಿ ಬೆಳಕು ಕಂಬವಿತ್ತೆಂದು ಹೇಳಿಕೆ ನೀಡಿದ್ದಾನೆ.ಅವನು, ಒಬ್ಬ ವ್ಯಕ್ತಿಯು ಮೈದಾನದಲ್ಲಿ ಬಿದ್ದಿರುವುದನ್ನು ಹಾಗೂ ಅವನ ಕುತ್ತಿಗೆಯಲ್ಲಿ ಲಾಂಗು (ಕತ್ತಿ) ಇರುವುದನ್ನು ನೋಡಿದ್ದಾನೆ.ಅವನು, ರಕ್ತದ ಕಲೆಯಿದ್ದ ದೊಣ್ಣೆಯು ಸದರಿ ಸ್ಥಳದಲ್ಲಿ ಬಿದ್ದಿರುವುದನ್ನೂ ಸಹ ಅವನು ಗಮನಿಸಿದ್ದಾನೆ.ಅವನು ಅಷ್ಟೇ ಅಲ್ಲದೆ ಮೈದಾನದಲ್ಲಿ ಬಿದ್ದಿದ್ದ ಮೃತನ ಮೇಲೆ ಆಪಾದಿತನು ಕುಳಿತಿದ್ದು ಅವನು ಕತ್ತಿಯನ್ನು ಹೊರತೆಗೆಯಲು ಏನೋ ಮಾಡುತ್ತಿದ್ದನೆಂದೂ ಆಗ ಈ ಸಾಕ್ಷಿದಾರನು ಮೃತನನ್ನು ಬಿಟ್ಟುಬಿಡಬೇಕೆಂದು ಕೂಗಿಕೊಂಡನೆಂಬುದನ್ನು ನ್ಯಾಯಾಲಯದ ಮುಂದೆ ಹೇಳಿಕೆ ನೀಡಿದ್ದಾನೆ.ಇದಾದ ನಂತರ ಅವನು ಸಹಾಯಕ್ಕಾಗಿ ಕಿರುಚಿದನೆಂದೂ, ಆ ಸಮಯದಲ್ಲಿ ಆಪಾದಿತನು ಹೆದರಿ ಚರ್ಚ್ ಕಡೆಗೆ ಓಡಿಹೋದನೆಂದು ತಿಳಿಸಿದ್ದಾನೆ.ಈ ಸಾಕ್ಷಿದಾರನು ಮೃತನ ಬಳಿ ಹೋಗಿದ್ದು, ಅವನು ಈಗಾಗಲೇ ಮೃತನಾಗಿರುವುದನ್ನು ನೋಡಿದ್ದಾನೆ.ಅಷ್ಟೇ ಅಲ್ಲದೆ, ಅವನು, ಆಪಾದಿತನನ್ನು ಹಿಂಬಾಲಿಸಲು ಹಾಗೂ ಅವನನ್ನು ಹಿಡಿಯಲು ಸಾಧ್ಯವಾಗಲಿಲ್ಲವೆಂದು ತಿಳಿಸಿದ್ದಾನೆ.ಆ ದಿನದಂದು ಬೆಳಿಗ್ಗೆ ಸುಮಾರು 11.00 ಗಂಟೆಯಲ್ಲಿ ಪೊಲೀಸರು, ಈ ಸಾಕ್ಷಿದಾರನನ್ನು ಪೊಲೀಸು ಠಾಣೆಗೆ ಕರೆದಿದ್ದು, ಆಪಾದಿತನನ್ನು ತೋರಿಸಿದ್ದಾರೆ, ತದನಂತರ ಅವನ ಹೇಳಿಕೆಯನ್ನು ದಾಖಲಿಸಿದ್ದು ಮುದ್ದೆ ಮಾಲು -1 ಎಂದು ಕತ್ತಿಯನ್ನು ಮುದ್ದೆಮಾಲು 10 ಎಂದು ದೊಣ್ಣೆಯನ್ನು ನ್ಯಾಯಾಲಯದ ಮುಂದೆ ಗುರುತಿಸಿರುವುದು ಮತ್ತೊಂದು ಸಾಕ್ಷ್ಯವಾಗಿದೆ.

52. ಈ ಸಾಕ್ಷಿದಾರನು ಅದನ್ನು ಹೊರಗೆಡಹಲು ಈ ಮೊದಲು ಸಾಕಷ್ಟು ಅವಕಾಶವನ್ನು ಹೊಂದಿದ್ದರೂ ಯಾವುದೇ ಸಮಯದಲ್ಲಿ ಸದರಿ ಮೇಲಿನ ರೀತಿಯಲ್ಲಿ ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿಲ್ಲವೆಂದು, ಪಾಟೀ ಸವಾಲು ನಡೆಯುವ ಸಮಯದಲ್ಲಿ ಈ ಸಾಕ್ಷಿದಾರನ ಸಾಕ್ಷ್ಯವನ್ನು ಗಂಭೀರವಾಗಿ ದೂಷಿಲಾಗಿದೆ ಅಷ್ಟೇ ಅಲ್ಲದೆ, ಆ ದಿನದಂದು ಜಯಲಕ್ಷ್ಮಿಯು ಇವನಿಗೆ ಯಾವ ಮಾಹಿತಿಯನ್ನೂ ನೀಡಿಲ್ಲವೆಂದು ಅಥವಾ ಆ ನಿರ್ದಿಷ್ಟ ಸ್ಥಳಕ್ಕೂ ಅವನು ಹೋಗಿಲ್ಲ ಹಾಗೂ ಹಾಗೆಯೇ ಘಟನೆಯನ್ನು ನೋಡಿಲ್ಲವೆಂಬುದನ್ನು ಅವನಿಗೆ ಸೂಚಿಸಲಾಗಿದೆ.ಪ್ರಾ.ಸಾ .4 ರ ಸಾಕ್ಷ್ಯದ 12 ನೇ ಕಂಡಿಕೆಯಲ್ಲಿ, ಈ ಸಾಕ್ಷಿದಾರನ ಸಂಪೂರ್ಣ ಹೇಳಿಕೆಯು ಇವನು ಪ್ರತ್ಯಕ್ಷ ಸಾಕ್ಷಿದಾರನೆಂಬುದನ್ನು ತೋರಿಸುತ್ತದೆ.ಅವನು ಘಟನೆಯನ್ನು ನೋಡಿಲ್ಲವೆಂಬುದನ್ನು ಅವನಿಗೆ ಸೂಚಿಸಲಾಗಿದೆ.ಆದರೆ, ಅವನು ಅಂಥ ಘಟನೆಯನ್ನು ನೋಡಿರುವುದನ್ನು ನಿರಾಕರಿಸಿದ್ದಾನೆ.ವಾಸ್ತವವಾಗಿ ಈ ಸಾಕ್ಷಿದಾರನು ಆ ರೀತಿಯಲ್ಲಿ ತಿಳಿಸಿದ್ದಾನೆಯೇ ಎಂಬುದನ್ನು ಪ್ರಾ.ಸಾ .18 ರ ಮುಂದೆ ಹೇಳಿದ್ದಾನೆ.

27 ನೇ ಕಂಡಿಕೆಯಲ್ಲಿ ಪ್ರಾ.ಸಾ .4 ರ ಸಂಪೂರ್ಣ ಹೇಳಿಕೆಯನ್ನು ಪ್ರಾ.ಸಾ .18 ರ ಮುಂದೆ ಹೇಳಲಾಗಿದ್ದು, ತನಿಖಾಧಿಕಾರಿಗೆ ಇದರಲ್ಲಿ ಪ್ರಾ.ಸಾ .18 ಹೇಳಿರುವುದು ಹೀಗಿರುತ್ತದೆ.

“27. XXXXX ಪ್ರಾ.ಸಾ. 4 ತನ್ನ ಮುಂದೆ ಹೇಳಿಕೆಯಲ್ಲಿ, ಅವನ ನೆರೆಹೊರೆಯವಳಾದ ಜಯಲಕ್ಷ್ಮಿಯು ತನ್ನನ್ನು ಕರೆದು ಏನೋ ಗಲಾಟೆಯು ಕಾಲೇಜಿನ ಕಾಂಪೌಂಡಿನ ಬಳಿ ನಡೆಯುತ್ತಿದೆ ಹಾಗೂ ವ್ಯಕ್ತಿಯು

ಮೃತನಾಗಿದ್ದಾನೆಯೇ ಅಥವಾ ಜೀವಂತವಾಗಿದ್ದಾನೆಯೇ ಎಂಬುದನ್ನು ನೋಡಲು ಅವನಿಗೆ ಹೇಳಿದ್ದು, ಕೂಡಲೇ ಅವನು ಕಾಲೇಜು ಕಾಂಪೌಂಡ್ ಕಡೆಗೆ ಓಡಿಹೋಗಿದ್ದು, ಕಾಂಪೌಂಡ್ನ ಬಳಿ ಬೀದಿ ಬೆಳಕಿನಿ ೦ ದ ಇದು ಪೂರ್ಣಹುಣ್ಣಿಮೆ ರಾತ್ರಿಯಾಗಿತ್ತೆಂದು, ಅವನ ಕುತ್ತಿಗೆಯಲ್ಲಿ ಲಾಂಗು ಸಿಲುಕಿಕೊಂಡು ಮೈದಾನದಲ್ಲಿ ವ್ಯಕ್ತಿಯು ಬಿದ್ದಿರುವುದನ್ನು ರಕ್ತದ ಕಲೆಯಿರುವ ದೊಣ್ಣೆಯು ಪಕ್ಕದಲ್ಲಿ ಬಿದ್ದಿದ್ದು ಅವನ ಮೇಲೆ ಆಪಾದಿತನು ಕುಳಿತುಕೊಂಡು ಲಾಂಗನ್ನು ಎಳೆಯಲು ಪ್ರಯತ್ನಿಸುತ್ತಿದ್ದು, ಅವನು ಅವನನ್ನು ಬಿಟ್ಟುಬಿಡು ಎ ೦ ದು ಕೂಗಿ ಜೋರಾಗಿ ಕಿರುಚಿಕೊಂಡಿರುವುದನ್ನು ಪೊಲೀಸರು ಬಂದು ಇದನ್ನು ವಿಚಾರಣೆ ಮಾಡುವಾಗ ಆಪಾದಿತನು ಎದ್ದು ಚರ್ಚಿನ ಕಡೆಗೆ ಓಡಿಹೋಗಿದ್ದು, ಮೃತನಾಗಿದ್ದ ಸದರಿ ವ್ಯಕ್ತಿಯ ಕಡೆಗೆ ಅವನು ಹೋದಾಗ, ಅವನು ಆಪಾದಿತನನ್ನು ಹಿಡಿಯಲು ಕಾಂಪೌಂಡ್ ಗೋಡೆಯನ್ನು ಹಾರಲು ಅವನಿಗೆ ಸಾಧ್ಯವಾಗಲಿಲ್ಲ ಎಂಬುದನ್ನು ತನ್ನ ಹೇಳಿಕೆಯಲ್ಲಿ ನನ್ನ ಮುಂದೆ ಹೇಳಿಲ್ಲವೆಂದು ಸೂಚಿಸಿರುವುದು ಸತ್ಯ. " 1

ಆದುದರಿಂದ ಪ್ರಾ.ಸಾ .18 ನೀಡಿದ ಸಂಪೂರ್ಣ ಸೂಚನೆಯನ್ನು ಒಪ್ಪಿಕೊಳ್ಳಲಾಗಿದೆ ಹಾಗೂ ಪ್ರಾ.ಸಾ .4 ಹಾಗೂ ಅವನ ಮುಂದೆ ಹೇಳಿಲ್ಲವೆಂಬುದನ್ನು ಒಪ್ಪಿಕೊಳ್ಳಲಾಗಿದೆ ಹಾಗೂ ಅವನೂ ಕೂಡ, ಪ್ರಾ.ಸಾ .4, ತನ್ನ ಹೇಳಿಕೆಯಲ್ಲಿ ಪೊಲೀಸರು ಮುದ್ದೆ ಮಾಲು  1 ರಿಂದ 10 ರ ವರೆಗೆ ಪ್ರಾ.ಸಾ.4 ಕ್ಕೆ ತೋರಿಸಿದ್ದರೆಂಬುದನ್ನು ತನ್ನ ಹೇಳಿಕೆಯಲ್ಲಿ ಹೇಳಿಲ್ಲವೆಂಬುದನ್ನು ಸಹ ಒಪ್ಪಿಕೊಳ್ಳಲಾಗಿದೆ. ಅವನು ಪೊಲೀಸು ಠಾಣೆಯಲ್ಲಿ ಅದನ್ನು ಗುರುತಿಸಿದ್ದಾನೆ.ಆದುದರಿಂದ ಪ್ರಾ.ಸಾ.4 ರ ಸಂಪೂರ್ಣ ಸಾಕ್ಷ್ಯವು ನ್ಯಾಯಾಲಯದ ಮುಂದೆ ಸುಧಾರಿಸಿರುವುದನ್ನು ತೋರಿಸುತ್ತದೆ.

53. ಅಪೀಲುದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಪ್ರಾ.ಸಾ .4 ರ ಸಾಕ್ಷ್ಯವು ಒಟ್ಟಾರೆಯಾಗಿ ಸುಧಾರಿಸಲ್ಪಟ್ಟಿದ್ದು, ಪೊಲೀಸರ ಮುಂದೆ ಇಂಥ ಹೇಳಿಕೆಯನ್ನು ಸಾಕ್ಷಿದಾರನು ನೀಡಿದ್ದರೂ ಕೂಡ ಈ ಸಾಕ್ಷಿದಾರನ ಹೇಳಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆಯ 161 ರೊಂದಿಗೆ ಹೋಲಿಕೆ ಮಾಡಿದ್ದು ಪಾಟೀ ಸವಾಲು ಮುಂದುವರಿಸಿದ ಅವಧಿಯಲ್ಲಿಯೂ ಏನನ್ನೂ ಬಾಯಿಬಿಟ್ಟಿರುವುದಿಲ್ಲವೆಂದು ದೃಢವಾಗಿ ವಾದಿಸಿದ್ದಾರೆ.ಅಷ್ಟೇ ಅಲ್ಲದೇ ಮಾನ್ಯ ವಕೀಲರು, ಅಧಿವಿಚಾರಣಾ ನ್ಯಾಯಾಲಯವು, ವಾಸ್ತವವಾಗಿ, ಅವರ ಕರ್ತವ್ಯವನ್ನು ನಿರ್ವಹಿಸಿದ್ದು, ನ್ಯಾಯಾಲಯದ ಮುಂದೆ ಗಣನೀಯ ಸಾಕ್ಷ್ಯದೊಂದಿಗಿನ ಹೇಳಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆಯ 161 ರೊಂದಿಗೆ ಹೋಲಿಸಿದ್ದು, ಅಪರಾಧ ನಿರ್ಣಯದ ತೀರ್ಪನ್ನು ದೋಷಯುಕ್ತವಾಗಿ ದಾಖಲಿಸಿದೆಯೆಂದು ನಿವೇದಿಸಿದ್ದಾರೆ.

54. ಈ ಸಂಬಂಧದಲ್ಲಿ, ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸುವುದು ಅರ್ಥಪೂರ್ಣವಾದುದಾಗಿದ್ದು, ಇದರಲ್ಲಿ 30 ರಿಂದ 37 ರ ವರೆಗಿನ ಕಂಡಿಕೆಯಲ್ಲಿ ಅಧಿವಿಚಾರಣಾ ನ್ಯಾಯಾಲಯವು, ಪ್ರಾ.ಸಾ .4 ರ ಪಾಟೀ ಸವಾಲಿನಲ್ಲಿ ಲಭ್ಯವಿರುವ ನಿರ್ದಿಷ್ಟ ಸಂಗತಿಯನ್ನು ಪರಿಗಣಿಸಿದೆ ಹಾಗೂ ಪ್ರಾ.ಸಾ .18 ರ ಸಾಕ್ಷ್ಯದ ಸುಧಾರಿತ ಆವೃತ್ತಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ 161 ನೇ ಪ್ರಕರಣದ ಮೇರೆಗಿನ ಸಾಕ್ಷ್ಯವನ್ನು ಹಾಗೂ ಹೇಳಿಕೆಯನ್ನು ಉದ್ಧರಿಸಿದೆ.ಇದಾದ ನಂತರ ನ್ಯಾಯಾಲಯವು, ತಹಸೀಲ್ದಾರ್ ಸಿಂಗ್ -ವಿರುದ್ಧ-ಉತ್ತರ ಪ್ರದೇಶ ರಾಜ್ಯ - ಎಐಆರ್ 1959 ಎಸ್ಸಿ 1012, ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಆಧರಿಸಿ, ವಾಸ್ತವವಾಗಿ, ಪ್ರಾ.ಸಾ.4 ತನಿಖಾಧಿಕಾರಿಯ ಮುಂದೆ ತನ್ನ ಹೇಳಿಕೆಯನ್ನು ನೀಡಿದ್ದಾರೆ ಆದರೆ ತನಿಖಾಧಿಕಾರಿಯು ತುಂಬಾ ನಿರ್ಲಕ್ಷ್ಯ ಮಾಡಿದ್ದಾರೆ ಹಾಗೂ ಪ್ರಾ.ಸಾ .4 ರ ಹೇಳಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆಯ 161 ನೇ ಪ್ರಕರಣದೊಂದಿಗೆ ನೋಡದೆ ಪಾಟೀ ಸವಾಲಿನಲ್ಲಿ ಸಾಮಾನ್ಯ ಉತ್ತರವನ್ನು ನೀಡಿದೆಯೆಂಬ ನಿರ್ಣಯಕ್ಕೆ ಬಂದಿದೆ.

55. ನಾವು ಕೂಡ ಸದರಿ ತೀರ್ಪಿನ 25 ಹಾಗೂ 26 ನೇ ಕಂಡಿಕೆಯನ್ನು ಎಚ್ಚರಿಕೆಯಿಂದ ಅವಗಾಹಿಸಿದ್ದೇವೆ.ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ಚ ಅಭಿಪ್ರಾಯೋಕ್ತಿಯನ್ನು ಈ ಮುಂದಿನಂತೆ ಓದಲಾಗಿದೆ:

"25. ಹಿಂದಿನ ಚರ್ಚೆಯಿಂದ ಈ ಮುಂದಿನ ಪ್ರಸ್ತಾವಗಳು ಹೊರಹೊಮ್ಮಿವೆ:(1) ತನಿಖೆಯು ನಡೆಯುವ ಅವಧಿಯಲ್ಲಿ ಪೊಲೀಸು ಅಧಿಕಾರಿಯ ಮುಂದೆ ಸಾಕ್ಷಿದಾರನು ಲಿಖಿತದಲ್ಲಿ ನೀಡಿದ ಹೇಳಿಕೆಯು, ಸಾಕ್ಷಿಯ ಕಟಕಟೆಯಲ್ಲಿ ನೀಡಿದ ಅವನ ಹೇಳಿಕೆಗೆ ಮಾತ್ರ ವಿರುದ್ಧವಾಗಿ ಬಳಸಬಹುದೇ ಹೊರತು ಇತರ ಉದ್ದೇಶಕ್ಕಾಗಿ ಅಲ್ಲ; (2) ಪೊಲೀಸು ಅಧಿಕಾರಿಯು ಲಿಖಿತಕ್ಕೆ ಇಳಿಸದ ಹೇಳಿಕೆಗಳನ್ನು ವಿರುದ್ಧವಾದವುಗಳೆಂದು ಬಳಸಲಾಗುವುದಿಲ್ಲ; ( 3) ನಿರ್ದಿಷ್ಟ ಹೇಳಿಕೆಯನ್ನು ವ್ಯಕ್ತವಾಗಿ ದಾಖಲಿಸದಿದ್ದರೂ, ವ್ಯಕ್ತವಾಗಿ ದಾಖಲಿಸಲಾದ

ಭಾಗವೆಂದು ಭಾವಿಸಲಾಗಿರುವ ಹೇಳಿಕೆಯನ್ನು ವಿರುದ್ಧವಾದುದೆ ಂ ದು ಭಾವಿಸಬಹುದು, ಆದರೆ ಹಾಗೆ ಕರೆಯಲಾದುದನ್ನು ಕಠಿಣತರವಾಗಿ ಬಿಟ್ಟುಬಿಡುವುದರ ಕಾರಣದಿಂದಲ್ಲ.ಆದರೆ, ಇದು ದಾಖಲಿಸಲಾದ ಹೇಳಿಕೆಯ ರಚನಾ ಭಾಗವೆಂದು ಭಾವಿಸುವ ಕಾರಣಕ್ಕಾಗಿ; (4) ಅಂಥ ಕಲ್ಪನೆಯನ್ನು ಈ ಮೂರು ಮ ಂ ದಿನ ಪ್ರಕರಣಗಳಲ್ಲಿ ಮಾತ್ರ ರೂ ಪಿಸ ಲಾ ಅನುಮತಿಸಬಹುದಾಗಿದೆ.(1) ಹೇಳಿಕೆಯಲ್ಲಿ ಕಂಡುಬಂದ ನಿರೂಪಣೆ ಅಥವಾ ನಿರೂಪಣೆಗಳಿಂದ ನಿರೂಪಣೆಯು ಅಗತ್ಯವಾಗಿ ಸೂಚ್ಯವಾಗಿದ್ದಾಗ; ಪೊಲೀಸರ ಮುಂದೆ ದಾಖಲಿಸಲಾದ ಹೇಳಿಕೆಯಲ್ಲಿ ಸಾಕ್ಷಿದಾರನು, ತಾನು, ನಿರ್ದಿಷ್ಟ ಸಮಯದಲ್ಲಿ ಬಿ, ಗೆ ಚುಚ್ಚುತ್ತಿದ್ದ ಎ ಯನ್ನು ನೋಡಿದ್ದೆನೆಂದು ಹೇಳಿದ್ದು, ಆದರೆ, ಸಾಕ್ಷಿದಾರ ಕಟಕಟೆಯಲ್ಲಿ, ಅದೇ ಸಮಯದಲ್ಲಿ ಬಿ ಗೆ ಚುಚ್ಚುತ್ತಿದ್ದ ಎ ಯನ್ನು ನೋಡಿದ್ದೆನೆಂದು ಹೇಳಿದ್ದು, ಆದರೆ, ಸಾಕ್ಷಿದಾರ ಕಟಕಟೆಯಲ್ಲಿ, ಅದೇ ಸಮಯದಲ್ಲಿ ಬಿ ಗೆ ಎ ಹಾಗೂ ಸಿ ಯು ಚುಚ್ಚುತ್ತಿರುವುದನ್ನು ನೋಡಿದನೆಂದು ಅವನು ಹೇಳಿದ್ದಲ್ಲಿ ಪೊಲೀಸರ ಮುಂದಿನ ಹೇಳಿಕೆಯಲ್ಲಿ, " ಮಾತ್ರ " ಎಂಬ ಪದವನ್ನು ಎಂದರೆ, ಸಾಕ್ಷಿದಾರನು ಬಿ ಗೆ ಎ ಮಾತ್ರ ಚುಚ್ಚುತ್ತಿದ್ದುದನ್ನು ನೋಡಿದೆ ಎಂದು ಸೂಚಿಸಬಹುದಾಗಿದೆ;(ii) ಹೇಳಿಕೆಯಲ್ಲಿ ಸಕಾರಾತ್ಮಕ ನಿರೂಪಣೆಯ ನಕಾರಾತ್ಮಕ ಸಂಗತಿ; ಪೊಲೀಸರ ಮುಂದೆ ದಾಖಲಿಸಿದ ಹೇಳಿಕೆಯಲ್ಲಿನ ವಿವರಣೆಯಲ್ಲಿ, ಸಾಕ್ಷಿದಾರನು, ಕಪ್ಪು ಮನುಷ್ಯನು ಬಿ ಯನ್ನು ಚುಚ್ಚಿದನೆಂದು, ಆದರೆ, ಸಾಕ್ಷಿದಾರ ಕಟಕಟೆಯಲ್ಲಿ, ಅವನು ಬೆಳ್ಳಗಿನವ್ಯಕ್ತಿಯು ಬಿ ಯನ್ನು ಚುಚ್ಚಿದನೆಂದು ಹೇಳಿದಲ್ಲಿ ಮೊದಲಿನ ಹೇಳಿಕೆಯನ್ನು, ದೋಷಿಯು ಕಪ್ಪಗಿರುವ ಮನುಷ್ಯನೆ ಂ ದು ಹೇಳುವುದಷ್ಟೇ ಅಲ್ಲ, ಅವನು ಬೆಳ್ಳಗಿರಲಿಲ್ಲ ಎಂದು ಹೇಳುವುದನ್ನೂ ಕೂಡ ನಿರೂಪಣೆಯನ್ನು ಒಳಗೊಂಡಿತ್ತೆಂದು ಭಾವಿಸಲೇಬೇಕು; ಹಾಗೂ(iii) ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದಾಗ ಹಾಗೂ ನ್ಯಾಯಾಲಯದ ಮುಂದೆ ಒಟ್ಟಿಗೆ ನಿಂತಿರಲಿಲ್ಲವೆಂದು ಹೇಳಿಕೆ ನೀಡಿದ್ದಾಗ; ದೃಷ್ಟಾಂತ:ಸಾಕ್ಷಿದಾರನು ಪೊಲೀಸರ ಮುಂದೆ ದಾಖಲಿಸಲಾದ ಹೇಳಿಕೆಯಲ್ಲಿ ಎ ಯು ಬಿ ಯನ್ನು ಚುಚ್ಚಿದ ನಂತರ ಉತ್ತರದ ಕಡೆಯ ಓಣಿಗೆ ಓಡಿಹೋದನೆ ಂ ದು ಆದರೆ ನ್ಯಾಯಾಲಯದಲ್ಲಿ ಅವನು, ಚುಚ್ಚಿದ ಕೂಡಲೇ ದಕ್ಷಿಣ ಓಣಿಯ ಕಡೆಗೆ ಓಡಿಹೋದನೆಂದು ಹೇಳಿಕೆ ನೀಡಿರುವುದು; ಚುಚ್ಚಿದ ನಂತರ ಎಂದರೆ ಅದೇ ಸಮಯದಲ್ಲಿ ಉತ್ತರದ ಓಣಿಯ ಕಡೆಗೆ ಹಾಗೂ ದಕ್ಷಿಣದ ಓಣಿಯ ಕಡೆಗೆ ಓಡಿಹೋಗಲು ಸಾಧ್ಯವಾಗುವುದಿಲ್ಲ ವಾದ್ದರಿಂದ ಇವುಗಳಲ್ಲಿ ಒಂದು ಹೇಳಿಕೆ ಸತ್ಯವಾಗಿದ್ದರೆ, ಮತ್ತೊಂದು ಅಗತ್ಯವಾಗಿ ಸುಳ್ಳಾಗಿರುತ್ತದೆ.

26. ಹಿಂದೆ ಹೇಳಲಾದ ಉದಾಹರಣೆಗಳು ವ್ಯಾಪಕವಾದ ಉದ್ದೇಶ ಹೊಂದಿರುವುದಿಲ್ಲ ಆದರೆ, ದೃಷ್ಟಾಂತಪೂರ್ಣವಾಗಿವೆಯಷ್ಟೆ. ಇದೇ ಉದಾಹರಣೆಯು ಒಂದು ಅಥವಾ ಹೆಚ್ಚಿನ ತಲೆಬರಹದಡಿಯಲ್ಲಿ ಬರಬಹುದು. ನಿರೂಪಣೆಯ ಉದ್ದೇಶವು ಕಾನೂನಿನ ಅಗತ್ಯೆಯನ್ನು ವಿರುದ್ಧವಾಗಿ ಪೂರೈಸಲು ಬಳಸಿಕೊಳ್ಳಲಾಗಿದೆಯೇ ಎಂಬ ಹಿಂದೆ ಹೇಳಲಾದ ತತ್ವಗಳನ್ನು ಗಮನದಲ್ಲಿಟ್ಟುಕೊಂಡು ತೀರ್ಪನ್ನು ನೀಡಲು ಸಾಕ್ಷಿದಾರ ಕಟಕಟೆಯಲ್ಲಿ ನೀಡಿದ ಪೊಲೀಸರು ದಾಖಲಿಸಿದ ಹೇಳಿಕೆಯ ಭಾಗ ಅಥವಾ ಭಾಗಗಳ ಹೋಲಿಕೆ ಮಾಡಿದ ನಂತರ ಪ್ರತಿಯೊಂದು ಪ್ರಕರಣವನ್ನು ನಿರ್ಣಯಿಸುವುದು ಅಧಿವಿಚಾರಣಾ ನ್ಯಾಧೀಶರಿಗೆ ಸಂಬಂಧಪಟ್ಟಿದುದಾಗಿದೆ".

ಆದುದರಿಂದ, ಸೀಮಿತ ಉದ್ದೇಶಕ್ಕೆ ಮಾತ್ರ 161 ರ ಹೇಳಿಕೆಯ ಸಾಕ್ಷಿದಾರರ ಸಾಕ್ಷ್ಯವನ್ನು ಹೋಲಿಸಿ ಸದರಿ ದೃಷ್ಟಿಕೋನವನ್ನು ಪರಿಗಣಿಸಿ ಹಾಗೂ ಪ್ರಾ.ಸಾ .4 ಹಾಗೂ ಪ್ರಾ.ಸಾ .18 ರ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಿ ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ವ್ಯಕ್ತಪಡಿಸಿದ ಭಿನ್ನಾಭಿಪ್ರಾಯಕ್ಕೆ ಯಾವುದೇ ಬಲವಾದ ಕಾರಣವನ್ನು ನಾವು ಗುರುತಿಸಿಲ್ಲ.ಆದುದರಿಂದ ನಮ್ಮ ಅಭಿಪ್ರಾಯದಲ್ಲಿ, ಈ ಆಧಾರವು, ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಿಗೆ ಲಭ್ಯವಾಗಿರುವುದಿಲ್ಲ.

56. ತನಿಖಾಧಿಕಾರಿ ಹಾಗೂ ಪ್ರಕರಣವನ್ನು ನಡೆಸಿದ ಸರ್ಕಾರಿ ಅಭಿಯೋಜಕರ ಕಡೆಯಿಂದ ಗಂಭೀರ ಲೋಪವಾಗಿರುವುದನ್ನು ನಾವು ಎಚ್ಚರಿಕೆಯಿಂದ ಗಮನಿಸಿದ್ದೇವೆ.ತನಿಖಾಧಿಕಾರಿಯು, ಸಾಕ್ಷ್ಯವನ್ನು ನೀಡಲು ಸಂಪೂರ್ಣ ಸಿದ್ಧತೆಯೊಂದಿಗೆ ನ್ಯಾಯಾಲಯಕ್ಕೆ ಬಂದಿಲ್ಲವೆಂಬುದು ಕಂಡುಬರುತ್ತದೆ.ನ್ಯಾಯಾಲಯಕ್ಕೆ ಬರುವ ಮೊದಲು ಎಲ್ಲಾ ತನಿಖಾಧಿಕಾರಿಗಳು, ತಾವು ನಡೆಸಿದ ತನಿಖೆಗೆ ಸಂಬಂಧಪಟ್ಟಂತೆ ಅವರೇ ಚುರುಕಾಗಿರಬೇಕು ಹಾಗೂ ಅವರ ಮುಂದೆ ನೀಡಿದ ಸಾಕ್ಷಿದಾರರ ಹೇಳಿಕೆಯನ್ನು ಹಾಗೂ ಸಾಕ್ಷಿದಾರರ ಸಾಕ್ಷ್ಯದ ಸಮಯದಲ್ಲಿ ಹೊರಗಡೆ ಇರುವ ವೈರುದ್ಯಗಳು ಹಾಗೂ ಲೋಪಗಳ ಸಂಬಂಧ ಪಾಟೀ ಸವಾಲಿನ ಅವಧಿಯಲ್ಲಿ ಪ್ರತಿವಾದಿ ವಕೀಲರು ಅವರಿಗೆ ಹಾಕಬಹುದಾದ ಪ್ರಶ್ನೆಗಳಿಗೆ ಉತ್ತರಿಸುವ ಸಲುವಾಗಿ ತನಿಖಾಧಿಕಾರಿಗಳೇ ಚುರುಕಾಗಿರಬೇಕು.ಪ್ರಕರಣದಲ್ಲಿನ ಸತ್ಯವನ್ನು ಗುರುತಿಸುವ ಸಲುವಾಗಿ ಯುಕ್ತ ರೀತಿಯಲ್ಲಿ ನ್ಯಾಯಾಲಯಕ್ಕೆ

ನೆರವಾಗುವುದು ತನಿಖಾಧಿಕಾರಿಯ ಕರ್ತವ್ಯವಾಗಿರುತ್ತದೆ.ಈ ನಿರ್ದಿಷ್ಟ ಪ್ರಕರಣದಲ್ಲಿ, ನ್ಯಾಯಾಲಯದ ಮುಂದೆ ದಾಖಲೆಗಳು ಲಭ್ಯವಿದ್ದರೂ ಕೂಡ ತನಿಖಾಧಿಕಾರಿ ಅವನಿಗೆ ಕೇಳಲಾದ ಪ್ರಶ್ನೆಗೆ ಉತ್ತರವನ್ನು ನೀಡುವ ಮೊದಲು ದಂಡ ಪ್ರಕ್ರಿಯಾ ಸಂಹಿತೆಯ 161 ನೇ ಪ್ರಕರಣದ ಅಡಿಯಲ್ಲಿ ದಾಖಲಿಸಲಾದ ಪ್ರಾ.ಸಾ .4 ರ ಹೇಳಿಕೆಯನ್ನು ನೋಡಿಕೊಳ್ಳಲೂ ತೊಂದರೆಯಾಗುವುದಿಲ್ಲ.ವ್ಯವಹಾರಗಳನ್ನು ನಡೆಸುವ ಪೊಲೀಸು ಸಿಬ್ಬಂದಿ ಹಾಗೂ ತನಿಖಾಧಿಕಾರಿಗಳ ಈ ರೀತಿಯ ವರ್ತನೆ ತಕ್ಕುದಲ್ಲ ಹಾಗೂ ಈ ಸಂಬಂಧದಲ್ಲಿ ಪೊಲೀಸು ಮಹಾ ನಿರ್ದೇಶಕರು ಹಾಗೂ ಪೊಲೀಸು ಮಹಾ ನಿರೀಕ್ಷಕರು ಯುಕ್ತ ಮಾರ್ಗಸೂಚಿಯನ್ನು ಹೊರಡಿಸಬೇಕಾಗುತ್ತದೆ.

57, ಸರ್ಕಾರಿ ಅಭಿಯೋಜಕರೂ ಕೂಡ ಈ ಪ್ರಕರಣವನ್ನು ಯುಕ್ತವಾಗಿ ನಿರ್ವಹಿಸುವಲ್ಲಿ ಶ್ರದ್ಧೆಯಿಲ್ಲದಿರುವುದು ನಮಗೆ ಕಂಡುಬರುತ್ತದೆ.ಸಾಕ್ಷಿದಾರರ ಸಾಕ್ಷ್ಯ ಎಂ ಮುಂದುವರಿದ ಅವಧಿಯಲ್ಲಿ ವೈರುದ್ಯಗಳು ಹಾಗೂ ಲೋಪಗಳನ್ನು ಅಥವಾ ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯದಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದಾಗಲೆಲ್ಲಾ, ನೀಡಲಾದ ವಾದದಲ್ಲಿ ಸಾಕ್ಷಿದಾರರನ್ನು ಪಾಟಿ ಸವಾಲು ಮಾಡುವ ಮೂಲಕವಾಗಲಿ ಅಥವಾ ಸಾಕ್ಷಿದಾರರನ್ನು ಮರು ವಿಚಾರಣೆ ಮಾಡುವ ಮೂಲಕವಾಗಲಿ ಇದನ್ನು ಸ್ಪಷ್ಟಪಡಿಸುವುದು ಅಭಿಯೋಜಕರ ಬದ್ದ ಕರ್ತವ್ಯವಾಗಿರುತ್ತದೆ.ಸರ್ಕಾರಿ ಅಭಿಯೋಜಕರು ತುಂಬಾ ಸಾಮಾನ್ಯವಾಗಿ ಅಥವಾ ಯಾಂತ್ರಿಕ ರೀತಿಯಲ್ಲಿ ವರ್ತಿಸಬಾರದು.ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯವನ್ನು ದಾಖಲಿಸುವಾಗ, ಅದರಲ್ಲೂ ನಿರ್ದಿಷ್ಟವಾಗಿ ಪಾಟೀ ಸವಾಲು ನಡೆಯುವ ಅವಧಿಯಲ್ಲಿ ಅವರು ಜಾಗೃತರಾಗಿರಬೇಕು ಹಾಗೂ ಎಚ್ಚರಿಕೆಯಿಂದಿರಬೇಕು.ಅವರು, ನಿಜವಾಗಿದ್ದಾರೆಯೇ ಎಂಬುದನ್ನು ಹೇಳುವುದಕ್ಕೆ ಸಂಬಂಧಿಸಿದಂತೆ ಹೊರಗೆಡಹಲಾದ ವೈರುದ್ಯಗಳು ಹಾಗೂ ಲೋಪಗಳನ್ನು ಎಚ್ಚರಿಕೆಯಿಂದ ಗಮನಿಸಬೇಕು ಹಾಗೂ ತನಿಖಾಧಿಕಾರಿಯ ಪಾಟೀ ಸವಾಲು ನಡೆಯುವ ಅವಧಿಯಲ್ಲಿ ಅದನ್ನು ರುಜುವಾತುಪಡಿಸುವ ಮೂಲಕ ಅವರು ಸಾಬೀತುಪಡಿಸಬೇಕು.ಸಾಕ್ಷಿದಾರನು ತಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದೇನೆಂದು ಹೇಳಿದರೆ ಹಾಗೂ ಅದರ ಬದಲು ದಂಡ ಪ್ರಕ್ರಿಯಾ ಸಂಹಿತೆಯ 161 ನೇ ಪ್ರಕರಣದ ಹೇಳಿಕೆಯಲ್ಲಿ ಅವನ ಸಾಕ್ಷ್ಯದ ಅಂಶಗಳು ಇವೆಯೆಂದು ಕಂಡುಬಂದರೆ, ತನಿಖಾಧಿಕಾರಿಯು ಅಂಥ ಹೇಳಿಕೆಯು 161 ರ ಹೇಳಿಕೆಯಲ್ಲಿ ಇಲ್ಲವೆಂದು ಹೇಳಿದರೆ ಅಂಥ ಸಾಂದರ್ಭಿಕ ಹಿನ್ನೆಲೆಯಲ್ಲಿ ಪರಿಸ್ಥಿತಿಯನ್ನು ಸ್ಪಷ್ಟಪಡಿಸುವ ಸಲುವಾಗಿ ಸದರಿ ಸಾಕ್ಷಿದಾರನನ್ನು ಮರು ವಿಚಾರಣೆ ಮಾಡುವುದು ಅಥವಾ ಸದರಿ ಸಾಕ್ಷಿದಾರನನ್ನು ಪಾಟೀ ಸವಾಲು ಮಾಡುವುದು ಪ್ರಾಸಿಕ್ಯೂಟರರ ಕರ್ತವ್ಯವಾಗಿತ್ತು.ಆದುದರಿಂದ, ಅಭಿಯೋಜಕರು, ಪ್ರಕರಣದ ವಾಸ್ತವಿಕ ಸಂಗತಿಗಳನ್ನು ಯುಕ್ತವಾಗಿ ಸ್ಪಷ್ಟಪಡಿಸುವ ಮೂಲಕ ನ್ಯಾಯಾಲಯಗಳಿಗೆ ನೆರವಾಗುವಲ್ಲಿ ಅಂತಿಮವಾಗಿ ಎಚ್ಚರಿಕೆ ವಹಿಸಬೇಕು ನಾವು ಹಲವಾರು ಸಂಖ್ಯೆಯ ಪ್ರಕರಣಗಳಲ್ಲಿ ಸಾಕ್ಷಿದಾರರು ಪ್ರಾಸಿಕ್ಯೂಷನ್ಗೆ ಅ ಪ್ರತಿಕೂಲಸಾಕ್ಷ್ಯವಾಗಿ ಪರಿಣಮಿಸಿದ್ದರೆ ಎಂದು ಗಮನಿಸಿದರೂ ಕೂಡ ತಾಂತ್ರಿಕವಾಗಿ ಅಥವಾ ಸಾಮಾನ್ಯವಾಗಿ ಪಾಟೀ ಸವಾಲನ್ನು ನಡೆಸುವುದನ್ನು ಗಮನಿಸಿದ್ದೇವೆ.ಮುಖ್ಯ ಸಾಕ್ಷಿದಾರನು ಪ್ರತಿಕೂಲ ಸಾಕ್ಷ್ಯವಾಗಿ ಪರಿಣಮಿಸಿದರೆ, ಸಾಕ್ಷಿದಾರನು ಪ್ರತಿಕೂಲವಾಗಿ ಪರಿಣಮಿಸಲು ಕಾರಣವೇನಾಗಿತ್ತು ಅಥವಾ ಪ್ರಾಸಿಕ್ಯೂಷನ್ಗೆ ಸುಸಂಗತವಲ್ಲದ ಸಾಕ್ಷ್ಯ ಲ್ಯ ನೀಡಲು ಕಾರಣವೇನು ಎಂಬುದನ್ನು ನ್ಯಾಯಾಲಯಕ್ಕೆ ತೋರಿಸುವುದು ಪ್ರಾಸಿಕ್ಯೂಷನ್ನ ಜವಾಬ್ದಾರಿಯಾಗಿ ಪರಿಣಮಿಸುವುದು.ಆದುದರಿಂದ, ಈ ನ್ಯಾಯಾಲಯದ ಮುಂದೆ ಸತ್ಯವನ್ನು ಹೊರತರುವ ಸಲುವಾಗಿ ಸದರಿ ಸಾಕ್ಷಿದಾರನನ್ನು ಪರಿಣಾಮಕಾರಿಯಾಗಿ ಪಾಟೀ ಸವಾಲು ನಡೆಸಲು ಪ್ರಾಸಿಕ್ಯೂಟರ್ರವರು ಅವರ ಎಲ್ಲಾ ಪ್ರಯತ್ನವನ್ನು ಮಾಡತಕ್ಕದ್ದು.ಆದುದರಿಂದ, ಈ ಸಂಬಂಧದಲ್ಲಿ, ಅವರು ಕಾನೂನಿಗನುಸಾರವಾಗಿ ಪ್ರಕರಣಗಳನ್ನು ಯುಕ್ತವಾಗಿ ನಡೆಸದಿದ್ದರೆ, ಅಗತ್ಯ ವ್ಯವಹರಣೆಗಳನ್ನು ಅವರ ವಿರುದ್ಧ ಪ್ರಾರಂಭಿಸತಕ್ಕದ್ದು ಎಂದು ಎಲ್ಲಾ ಸರ್ಕಾರಿ ಪ್ರಾಸಿಕ್ಯೂಟರ್ರವರಿಗೆ ಪ್ರಾಸಿಕ್ಯೂಷನ್ನಳ ನಿರ್ದೇಶಕರುಗಳು ಯುಕ್ತ ನಿರ್ದೇಶನಗಳನ್ನು ಹೊರಡಿಸತಕ್ಕದ್ದು ಹಾಗೂ ಅವರಿಗೆ ಹೆಚ್ಚಿನ ಷರತ್ತು ವಿಧಿಸತಕ್ಕದ್ದು.ಆದುದರಿಂದ ಈ ಹಿನ್ನೆಲೆಯಲ್ಲಿ ನಾವು, ಈ ನ್ಯಾಯಾಲಯವು ಮೇಲೆ ಅಭಿಪ್ರಾಯಪಟ್ಟಿರುವುದಕ್ಕೆ ಇಲ್ಲಿ ಇನ್ನು ಮುಂದೆ ಇದಕ್ಕೆ ಸಂಬಂಧಪಟ್ಟಂತೆ ಪ್ರಾಸಿಕ್ಯೂಷನ್ ಪ್ರಕರಣಗಳ ಜಾಗ್ರುತೆ ವಹಿಸುವ ಸಲುವಾಗಿ ಪೊಲೀಸು ಮಹಾ ನಿರ್ದೇಶಕರಿಗೆ ಹಾಗೂ ಪೊಲೀಸು ಮಹಾ ನಿರೀಕ್ಷಕರಿಗೆ ಈ ತೀರ್ಪಿನ ಪ್ರತಿಯನ್ನು ಕಳುಹಿಸಲು ರಿಜಿಸ್ಟ್ರಾರ್ (ಜನರಲ್) ರವರಿಗೆ ನಿರ್ದೇಶಿಸಲು ಬಯಸುತ್ತೇವೆ.

58. ಇದಲ್ಲದೇ, ಪ್ರಾ.ಸಾ .4 ರ ಸಾಕ್ಷ್ಯದಿಂದ ಯಾವುದೇ ಉಪಯೋಗಕರ ಮಾಹಿತಿ ಹೊರಬಿದ್ದಿಲ್ಲ.ಹಾಗೆಯೇ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಈ ನಿರ್ದಿಷ್ಟ ವ್ಯಕ್ತಿಯು ವಿಚಾರಿಸಿದಾಗ ಸಾಕ್ಷಿದಾರನು ಘಟನೆ ನಡೆದ ಸಮಯದಲ್ಲಿ ಹಾಗೂ ಸ್ಥಳದಲ್ಲಿಯೇ ಹಾಜರಿದ್ದರೂ ಕೂಡ ಅವನು ಘಟನೆಯ ಬಗ್ಗೆ ಪೊಲೀಸರಿಗೆ ಅದನ್ನೇ ಬಹಿರಂಗಪಡಿಸಿದ್ದಾನೆ.ಆದರೆ ಪೊಲೀಸರು ಘಟನೆಯು ನಡೆದ ಮಾರನೆಯ ದಿನದವರೆಗೆ ಅವನ ಹೇಳಿಕೆಯನ್ನು

ದಾಖಲಿಸಿರಲಿಲ್ಲ.ಆದರೆ ಈ ಸಾಕ್ಷಿದಾರನ ಸಾಕ್ಷ್ಯವು, ಪೊಲೀಸರು ಸ್ಥಳವನ್ನು ತಲುಪಿದಾಗ ಹಾಗೂ ಪೊಲೀಸರು ರಾತ್ರಿ 9.20 ರಿಂದ ಬೆಳಿಗ್ಗೆ 1.00 ರ ವರೆಗೆ ಸ್ಥಳದಲ್ಲಿದ್ದಾಗ ಪೊಲೀಸರಿಗೆ ಅವನು ಪ್ರಕರಣದ ಸಂಪೂರ್ಣ ವಾಸ್ತವಿಕ ಸಂಗತಿಗಳನ್ನು ನಿಜವಾಗಿಯೂ ಬಹಿರಂಗಪಡಿಸಿದ್ದಾನೆ ಎಂಬುದು ಪಾಟೀ ಸವಾಲಿನ ಅವಧಿಯಲ್ಲಿ ತುಂಬಾ ಸ್ಪಷ್ಟವಾಗಿದ್ದು, ಆದರೆ ಪೊಲೀಸು ನಿರೀಕ್ಷಕರಿಗೆ ಸರಿಯಾಗಿ ತಿಳಿಸುವ ಕಾರಣಕ್ಕಾಗಿ, ಅವನು ಈ ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸಿಲ್ಲ.ಈ ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸುವಲ್ಲಿ ಸ್ವಲ್ಪಮಟ್ಟಿನ ವಿಳಂಬವಾಗಿದೆಯಾದರೂ, ಈ ಸಾಕ್ಷಿದಾರನನ್ನು ಯಾಕೆ ನಂಬಲಾಗುತ್ತಿಲ್ಲ ಎಂಬ ಬಗ್ಗೆ ಯಾವುದೇ ಇತರ ಅಸ್ಥಿರತೆಯಿಲ್ಲ.ಪಾಟಿ ಸವಾಲಿನ ಅವಧಿಯಲ್ಲಿ, ಈ ಸಾಕ್ಷಿದಾರನು ಆಪಾದಿತನನ್ನು ಯಾಕೆ ತಪ್ಪಾಗಿ ಸೂಚಿಸಬೇಕಾಗಿತ್ತು ಎಂಬ ಬಗ್ಗೆ ಯಾವುದೇ ಸಾಕ್ಷ್ಯಾಧಾರ ಹೊರ ಬಿದ್ದಿಲ್ಲ.ಈ ಸಾಕ್ಷಿದಾರನಿಗೆ ಪಾಟೀಸವಾಲಿನ ಅವಧಿಯಲ್ಲಿ ಯಾವುದೇ ಆಸಕ್ತಿತನ ಇಲ್ಲ ಅಥವಾ ಪಕ್ಷಪಾತ ಇಲ್ಲ ಅಥವಾ ಪ್ರತಿವಾದವು ಶತೃತ್ವವನ್ನು ರುಜುವಾತುಪಡಿಸಿಲ್ಲ. ವಾಸ್ತವವಾಗಿ ಅವನು ಘಟನಾ ಸ್ಥಳದ ಬಳಿ ವಾಸವಿದ್ದ ರಾಷ್ಟ್ರದ ಗೌರವಾನ್ವಿತ ನಾಗರಿಕನಾಗಿದ್ದು, ಅವನು ಆಸಕ್ತಿಯಿಲ್ಲದೆ ಅಥವಾ ಪಕ್ಷಪಾತವಿಲ್ಲದೆ ಅಥವಾ ಹಗೆತನವಿಲ್ಲದೆ ಘಟನಾ ಸ್ಥಳಕ್ಕೆ ಹೋಗಿ ನೋಡಿರುವ ಎಲ್ಲಾ ಸಾಧ್ಯತೆಗಳಿದ್ದುದು, ಪಾಟಿ ಸವಾಲಿನ ಅವಧಿಯಲ್ಲಿ ರುಜುವಾತಾಗಿದೆ.ಈ ಸಾಕ್ಷಿದಾರನ ಸಾಕ್ಷ್ಯವನ್ನು ನಂಬದಿರುವುದಕ್ಕೆ ಏನೂ ಇರುವುದಿಲ್ಲ.

59. ವಾಸ್ತವವಾಗಿ, ಅಧಿವಿಚಾರಣಾ ನ್ಯಾಯಾಲಯದ ಮೂಲಕ ಮಾಡಿದ ಪ್ರಾ.ಸಾ .4 ರ ಸಾಕ್ಷ್ಯದ ಮೌಲ್ಯಮಾಪನವನ್ನು ಎಚ್ಚರಿಕೆಯಿಂದ ನಾವು ಅವಗಾಹಿಸಿದ್ದೇವೆ.ಮಾನ್ಯ ವಕೀಲರು ಎತ್ತಿದ ಎಲ್ಲಾ ಅಂಶಗಳನ್ನು ಅಧಿವಿಚಾರಣಾ ನ್ಯಾಯಾಲಯವು ಎಚ್ಚರಿಕೆಯಿಂದ ಪರಿಗಣಿಸಿ ಉತ್ತರ ನೀಡಿದೆ.ತದನಂತರ ಅಧಿವಿಚಾರಣಾ ನ್ಯಾಯಾಲಯವು ಅಂಥ ಸಾಕ್ಷಿದಾರರ ಸಾಕ್ಷ್ಯವನ್ನು ಅವಲಂಬಿಸಿದೆ.ನಾವು ಸಾಕ್ಷ್ಯ ಮೌಲ್ಯಮಾಪನದಲ್ಲಿ ಯಾವುದೇ ಕಾನೂನುಬಾಹಿರತೆ ಅಥವಾ ತರ್ಕ ವಿರುದ್ಧತೆಯನ್ನು ಗುರುತಿಸಿಲ್ಲ.ಮೇಲೆ ಗಮನಿಸಲಾದಂತೆ, ಜಯರಾಮ್ ಶಿವ ಟ್ಯಾಗೋರ್ -ವಿರುದ್ಧ-ಮಹಾರಾಷ್ಟ್ರ ರಾಜ್ಯ ಪ್ರಕರಣದಲ್ಲಿ ಮೇಲೆ ಉದ್ಧರಿಸಲಾದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಚ ಅಂಥ ಸಾಕ್ಷಿದಾರನ ಹೇಳಿಕೆಯನ್ನು ದಾಖಲಿಸುವಲ್ಲಿ ಯಾವುದೇ ಕೆಲವು ಸಣ್ಣಪುಟ್ಟ ವ್ಯತ್ಯಾಸವಿದ್ದರೂ ಆಪಾದಿತನನ್ನು ತಪ್ಪಾಗಿ ಸಿಕ್ಕಿಸಲು ಸಾಕ್ಷಿದಾರನಿಗೆ ಯಾವುದೇ ಕಾರಣವಿಲ್ಲದಿದ್ದರೆ ಹಾಗೂ ಅಂಥ ಸಾಕ್ಷಿದಾರನ ಹೇಳಿಕೆಯನ್ನು ದಾಖಲಿಸುವಲ್ಲಿ ವಿಳಂಬವಾಗಿದ್ದರೆ, ಅದು ಯಾವುದೇ ರೀತಿಯಲ್ಲಿ ಸಾಕ್ಷಿದಾರನು ಆಸಕ್ತಿಯನ್ನು ಕಳೆದುಕೊಳ್ಳುವಂತೆ ಆಗಬಾರದು ಅಥವಾ ನ್ಯಾಯಾಲಯವು ಅಂಥ ಸಾಕ್ಷಿದಾರನ ಸಾಕ್ಷ್ಯವನ್ನು ನಿರಾಕರಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದೆ.ಆದುದರಿಂದ ಈ ಸಾಕ್ಷಿದಾರನಿಗೆ ಸಂಬಂಧಪಡುವಷ್ಟರಮಟ್ಟಿಗೆ ಅಧಿವಿಚಾರಣಾ ನ್ಯಾಯಾಲಯವು ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಿರುವುದರಲ್ಲಿ ಹಸ್ತಕ್ಷೇಪ ಮಾಡುವ ಯಾವುದೇ ಬಲವಾದ ಕಾರಣಗಳನ್ನು ನಾವು ಗುರುತಿಸಿಲ್ಲ.

60. ಖಂಡಿತವಾಗಿ, ಆ ನಿರ್ದಿಷ್ಟ ದಿನದಂದು ಈ ಪ್ರಾ.ಸಾ .4 ರೊಂದಿಗೆ ಅದನ್ನು ಹೇಳಲಾಗಿರುವ ಮತ್ತೊಬ್ಬ ಸಾಕ್ಷಿದಾರನನ್ನು ವಿಚಾರಣೆ ಮಾಡದಿರುವಲ್ಲಿ ಪ್ರಾಸಿಕ್ಯೂಷನ್ ಕಡೆಯಿಂದ ಲೋಪವಾಗಿದೆ.ಮತ್ತೊಬ್ಬ ಪ್ರತ್ಯಕ್ಷ ಸಾಕ್ಷಿದಾರ ಅಥವಾ ಮತ್ತೊಬ್ಬ ಹುಟ್ಟಿಸಿಕೊಂಡು ಹೇಳಿದ ಸಾಕ್ಷಿದಾರನನ್ನು ವಿಚಾರಣೆ ಬ ಮಾಡದಿರುವ ಮಾತ್ರದಿಂದಲೇ ಪ್ರಾ.ಸಾ.4 ಈ ಸಾಕ್ಷಿದಾರನ ಸಾಕ್ಷ್ಯವನ್ನು ನಿರಾಕರಿಸಲು ಇದಕ್ಕೆ ಯಾವುದೇ ಆಧಾರವಿರುವುದಿಲ್ಲ.ಹೀಗಾಗಿ, ಪ್ರಚೋದನೆಯ ಸನ್ನಿವೇಶ ಹಾಗೂ ಕಡೆಯ ನೋಡಲಾದ ಸಿದ್ಧಾಂತವನ್ನು ರುಜುವಾತುಪಡಿಸದಿರುವುದನ್ನು ಪರಿಗಣಿಸದೆ ಏಕಮಾತ್ರ ಪ್ರತ್ಯಕ್ಷ ಸಾಕ್ಷಿದಾರನ ಆಧಾರದ ಮೇಲೆ ತನ್ನ ವಾದವನ್ನು ಪ್ರಾಸಿಕ್ಯೂಷನ್ನು ಸಾಬೀತುಪಡಿಸಿದೆಯೆಂಬುದು ನಮ್ಮ ಅಭಿಪ್ರಾಯವಾಗಿದೆ.

61. ವಶಪಡಿಸಿಕೊಳ್ಳುವಿಕೆ:ಆಪಾದಿತನ ಕೋರಿಕೆಯ ಮೇರೆಗೆ ಸಾಕ್ಷ್ಯದಂತಿರುವ ವಸ್ತುಗಳನ್ನು ಪುನರ್ವಶಪಡಿಸಿಕೊಂಡಿರುವುದನ್ನು ಪ್ರಾಸಿಕ್ಯೂಷನ್ನೂ ಕೂಡ ಅವಲಂಬಿಸಿದೆ.ಸಹಜವಾಗಿ, ಪ್ರಾ.ಸಾ .3 ಅಮ್ಮದ್ಯಾನ್ನ ಸಾಕ್ಷ್ಯ ಹಾಗೂ ತನಿಖಾಧಿಕಾರಿ ಹಾಗೂ ಪೊಲೀಸು ಸಾಕ್ಷಿದಾರರನ್ನೂ ಕೂಡ ನೋಡಬೇಕಾಗುತ್ತದೆ.ಪ್ರಾ.ಸಾ .18, ತನಿಖಾಧಿಕಾರಿಯು, ನ್ಯಾಯಾಲಯದ ಮುಂದೆ,ದಿನಾಂಕ: 18.02.2011 ರಂದು ತಾನೇ ಆಪರಾಧಿಕ ಸಾಕ್ಷ್ಯ 26, ಆಪರಾಧಿಕ ಸಾಕ್ಷ್ಯ ಎ 27 ಹಾಗೂ ಪೊಲೀಸು ಪೇದೆ 762 ರೊಟ್ಟಿಗೆ ಎಚ್-ಕ್ರಾಸ್ ಬಳಿ ಆಪಾದಿತನನ್ನು ದಸ್ತಗಿರಿ ಮಾಡಿದೆನೆಂದು ನ್ಯಾಯಾಲಯದ ಮುಂದೆ ತಿಳಿಸಿದ್ದಾರೆ.ತದನಂತರ ಆಪಾದಿತನನ್ನು ಪೊಲೀಸು ಠಾಣೆಗೆ ಕರೆತಂದಿದ್ದು ನಿಶಾನೆ ಪಿ .20 ರ ಪ್ರಕಾರ ಅವನ ಸ್ವಯಂ ಹೇಳಿಕೆಯನ್ನು ದಾಖಲಿಸಲಾಗಿತ್ತು ಹಾಗೂ ಸ್ವಯಂ ಹೇಳಿಕೆಯ ಆಧಾರದ ಮೇಲೆ ಆಪಾದಿತನನ್ನು ಹಾಗೂ ದೃಶ್ಯ ನಡೆದ

ಪಂಚನಾಮೆ ಸಾಕ್ಷಿದಾರರನ್ನು ಪೊಲೀಸರು ಕರೆದುಕೊಂಡು ಹೋಗಿದ್ದು, ಅದೇ ದಿನದಂದು ಪಂಚ ಸಾಕ್ಷಿದಾರರ ಸಮ್ಮುಖದಲ್ಲಿ ನಿಶಾನೆ ಪಿ .2 ರ ಪ್ರಕಾರ ಸ್ಥಳ ಪಂಚನಾಮೆಯನ್ನು ರೂಪಿಸಲಾಗಿತ್ತೆಂದು, ಪೊದೆಯೊಳಗೆ ದೊಣ್ಣೆಯನ್ನು ಬಚ್ಚಿಟ್ಟಿದ್ದ ಹೊಸಕೋಟೆಯ ಸರ್ಕಾರಿ ಕಿರಿಯ ಕಾಲೇಜಿಗೆ ಆಪಾದಿತನನ್ನೂ ಪಂಚನಾಮೆ ಸಾಕ್ಷಿದಾರರನ್ನೂ, ಪೊಲೀಸರನ್ನು ಕರೆದುಕೊಂಡು ಹೋಗಿದ್ದು, ಅದನ್ನೂ ತಾನು ಹಾಜರುಪಡಿಸಿದ್ದು ತಾನೇ ಹಾಜರುಪಡಿಸಿದೆನೆಂದು ಹಾಗೂ ನಿಶಾನೆ ಪಿ .3 ಮಹಜರಿನ ಅಡಿಯಲ್ಲಿ ಅದನ್ನು ಪುನಃ ವಶಪಡಿಸಿಕೊಳ್ಳಲಾಯಿತೆಂದು ನ್ಯಾಯಾಲಯದ ಮುಂದೆ ತಿಳಿಸಿದ್ದಾರೆ.

ಅದೇ ದಿನದಂದು ಸರ್ಕಾರಿ ಆಸ್ಪತ್ರೆಯ ಬಳಿಯಿರುವ ಮನೆಗೆ ಆಪಾದಿತನು ಅವರನ್ನು ಕರೆದುಕೊಂಡುಹೋಗಿ, ಅವನ ಮನೆಯಲ್ಲಿ, ರಕ್ತದಕಲೆಯಿರುವ ತುಂಬುದೋಳಿನ ಟೀ-ಷರ್ಟ್, ಬೂದುಬಣ್ಣದ ಪ್ಯಾಂಟ್ ಹಾಗೂ ಮೈಕ್ರೋಮ್ಯಾಕ್ಸ್ ಡ್ಯುಯಲ್ ಸಿಮ್ ಮೊಬೈಲ್ ಫೋನನ್ನು ಹಾಜರುಪಡಿಸಿದ್ದು, ಅವುಗಳನ್ನು ಮುದ್ದೆ ಮಾಲು 11 ರಿಂದ 18 ರಲ್ಲಿ ಗುರುತುಹಾಕಲಾಯಿತು ಎಂಬುದು ಪ್ರಾಸಿಕ್ಯೂಷನ್ನ ವಾದವಾಗಿದೆ.

62. ಪ್ರಾ.ಸಾ .3 ಅಮ್ಮದ್ ಖಾನ್ನು ವಾಸ್ತವವಾಗಿ ಪಿ .2 ರಿಂದ ಪಿ .4 ರ ವರೆಗಿನ ನಿರ್ದಿಷ್ಟ ಮಹಜರು ನಿಶಾನೆಗಳನ್ನು ಸಂಪೂರ್ಣವಾಗಿ ಸಮರ್ಥಿಸಿದ್ದು, ಅವನು, ತನಿಖಾಧಿಕಾರಿಯು ಏನನ್ನು ತಿಳಿಸಿದರೋ ಅದನ್ನು ತಿಳಿಸಿದ್ದಾನೆ.ಅವರು, ಆಪಾದಿತನ ಕೋರಿಕೆಯ ಮೇರೆಗೆ ವಶಪಡಿಸಿಕೊಳ್ಳಲಾಗಿದ್ದ ದೊಣ್ಣೆಯು ರಕ್ತದ ಕಲೆಯಿಂದ ಕೂಡಿತ್ತು ಹಾಗೂ ಆಪಾದಿತನ ಇತರ ಬಟ್ಟೆಗಳು ರಕ್ತದ ಕಲೆಯಿಂದ ಕೂಡಿದ್ದವು ಎಂದು ಅವರು ನೇರವಾಗಿ ತಿಳಿಸಿದ್ದಾರೆ.ಪಾಟೀ ಸವಾಲಿನ ಅವಧಿಯಲ್ಲಿ ಬೇರೇನೂ ಅನುಕೂಲಕರವಾದುದು ಹೊರಬಿದ್ದಿರುವುದಿಲ್ಲ.ಆದರೆ ಮಾನ್ಯ ವಕೀಲರು, ಈ ಮಹಜರು ನಿಶಾನೆ ಪಿ .3 ಹಾಗೂ ಪಿ .4 ರ ಮೇಲೆ ಪೊಲೀಸರು ಮಹಜರುಗಳಾದ ಮೇಲೆ ಆಪಾದಿತನ ಸಹಿಯನ್ನು ಪಡೆದುಕೊಂಡಿದ್ದರೆಂದು ನ್ಯಾಯಾಲಯದ ಮುಂದೆ ವಾದಿಸಿದ್ದಾರೆ.ಆದುದರಿಂದ ಇವು ಅಂಗೀಕಾರಾರ್ಹವಾದವುಗಳಲ್ಲ.ಆದರೆ, ಆಪಾದಿತನ ಸಹಿಯನ್ನು ಒಳಗೊಂಡಿರುವ ಪೊಲೀಸರು ರಚಿಸಿದ ಮಹಜರುಗಳನ್ನು ಯಾಕೆ ಅಂಗೀಕರಿಸಬಾರದು ಎಂಬುದಕ್ಕೆ ಸಂಬಂಧಿಸಿದಂತೆ ಇದು ರುಜುವಾತಾದ ಹೊರತಾಗಿಯೂ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಲು ಯಾವುದೇ ಕಾನೂನು ಅಥವಾ ಯಾವುದೇ ನಿರ್ಣಯದ ಕಡೆಗೆ ಅವರು ನಮ್ಮ ಗಮನವನ್ನು ಸೆಳೆದಿರುವುದಿಲ್ಲ.ಅಂಥ ಸಂದರ್ಭದಲ್ಲಿ ನ್ಯಾಯಾಲಯವು, ಆಪಾದಿತನ ಸಹಿಗೆ ಯಾವುದೇ ಪ್ರಾಧಾನ್ಯತೆ ನೀಡಬಾರದು.

63. ತನಿಖಾಧಿಕಾರಿಯ ಹಾಗೂ ಈ ಸಾಕ್ಷಿದಾರನ ಸಾಕ್ಷ್ಯದ ಓದು ಹಾಗಿರಲಿ, ಪೊಲೀಸರು, ಆಪಾದಿತನ ಕೋರಿಕೆಯಂತೆ ಕೆಲವು ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.ಆದರೆ, ತನಿಖಾಧಿಕಾರಿಯ ಸಾಕ್ಷ್ಯದಿಂದ ಈ ಸಾಕ್ಷಿದಾರ ಪ್ರಾ.ಸಾ .3 ಹೊಸಕೋಟೆ ಗ್ರಾಮದವನಾಗಿದ್ದು ಅವನು, ಆಪಾದಿತನ ಮನೆಯ ಹತ್ತಿರ ಸ್ಥಳೀಯವಾಗಿ ವಾಸಿಸುತ್ತಿರಲಿಲ್ಲವೆಂಬುದು ಕಂಡು ಬರುತ್ತದೆ.ತನಿಖಾಧಿಕಾರಿಯಾಗಿರುವ ಪ್ರಾ.ಸಾ .18, ತಾನು ಪಂಚ ಸಾಕ್ಷಿದಾರರಾಗಿ ನಿರ್ವಹಿಸಲು ಆಪಾದಿತನ ನೆರೆಹೊರೆಯ ನಿವಾಸಿಗಳನ್ನು ನಿಗದಿಪಡಿಸಿಕೊಂಡಿರಲಿಲ್ಲವೆಂದು ಒಪ್ಪಿಕೊಂಡಿದ್ದಾರೆ.ಮಾನ್ಯ ವಕೀಲರು ಆ ಸಮಯದಲ್ಲಿ ಆಪಾದಿತನ ಮನೆಯಲ್ಲಿ ಹಲವಾರು ಮಂದಿ ಜೊತೆಯಲ್ಲಿದ್ದರೂ ಕೂಡ ಅವರಲ್ಲಿ ಒಬ್ಬರನ್ನು ಮಹಜರಿಗೆ ಸಾಕ್ಷಿದಾರರುಗಳಾಗಿ ಆಯ್ಕೆ ಮಾಡಿಕೊಂಡಿದ್ದರೆಂದು ವಾದಿಸಿದ್ದಾರೆ.ಅಷ್ಟೇ ಅಲ್ಲದೆ, ಆ ನಿರ್ದಿಷ್ಟ ಸಮಯದಲ್ಲಿ ಆಪಾದಿತನ ಮನೆಯಲ್ಲಿ ಹಲವಾರು ಮಂದಿ ಜೊತೆಯಲ್ಲಿದ್ದರೂ ಕೂಡ ಒಬ್ಬರನ್ನು ಆಯ್ಕೆ ಮಾಡಿದ್ದಾರೆ.ಮಾನ್ಯ ವಕೀಲರು, ಅವರಲ್ಲಿ ಯಾರನ್ನೂ ಮಹಜರಿಗೆ ಸಾಕ್ಷಿದಾರರಾಗಿ ಆಯ್ಕೆ ಮಾಡಿರಲಿಲ್ಲವೆಂದು ವಾದಿಸಿದ್ದಾರೆ.ಯಾರನ್ನು ಸಾಕ್ಷಿದಾರರಾಗಿ ಆಯ್ಕೆ ಮಾಡಬೇಕಾಗಿತ್ತು ಎಂಬ ಬಗ್ಗೆ ಯಾವುದೇ ಕಠಿಣ ಹಾಗೂ ದೃಢ ನಿಯಮವಿಲ್ಲ.ಸಾಮಾನ್ಯವಾಗಿ ಸ್ಥಳೀಯವಾಗಿ ಗೌರವಾನ್ವಿತರಾಗಿರುವ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.ಆದರೆ, ಅವರ ಸಾಕ್ಷ್ಯ ಎಣಿ ನಂಬಲರ್ಹವಾಗಿದ್ದ ಹೊರತು ಸಾಕ್ಷಿದಾರರ ಸಾಕ್ಷ್ಯವನ್ನು ತಿರಸ್ಕರಿಸಬಹುದಾಗಿದೆ ಎಂಬ ಅರ್ಥವನ್ನು ಅದು ನೀಡುವುದಿಲ್ಲ.

64. ಸ್ಥಳ ಮಹಜರಾಗಿರುವ ನಿಶಾನೆ ಪಿ .2 ಮಹಜರನ್ನು ರಚಿಸುವಾಗ, ಈಗಾಗಲೇ ಕಬ್ಬಿಣದ ಕತ್ತಿಯನ್ನು ವಶಪಡಿಸಿಕೊಳ್ಳಲಾಗಿತ್ತು ಆದರೆ, ಪೊಲೀಸರು ದಾಖಲಿಸಿದ ಆಪಾದಿತನ ನಿಶಾನೆ ಪಿ .20 ಸ್ವಯಂ ಹೇಳಿಕೆಯಲ್ಲಿ, ಆಪಾದಿತನು ತಾನು ಪಾವಟಿಗೆ ಹಿಂದೆ ಇಡಲಾಗಿರುವ ಲಾಂಗುಕತ್ತಿಯನ್ನು ಹಾಗೂ ದೊಣ್ಣೆಯನ್ನು ತೋರಿಸಿದುದಾಗಿ ಎಂದರೆ, ತನಿಖಾಧಿಕಾರಿಯ ಪ್ರಕಾರ ಹೇಳುವುದಾದರೆ ಆಪಾದಿತನು ಹೇಳಿರುವುದನ್ನು

ತೋರಿಸಲಾಗಿದೆ.ಆಪಾದಿತನು, ತಾನು ಪಾವಟಿಗೆಯ ಹಿಂದೆ ದೊಣ್ಣೆಯನ್ನು ಹಾಗೂ ಕತ್ತಿಯನ್ನು ಹುದುಗಿಸಿಟ್ಟಿರುವುದಾಗಿ ಅವರಿಗೆ ತಿಳಿಸಿದ್ದಾನೆ.ಆದರೆ, ಸದರಿ ದೊಣ್ಣೆಯನ್ನು ಪಾವಟಿಗೆಯಿಂದ ಪುನಃ ವಶಪಡಿಸಿಕೊಂಡಿಲ್ಲ.ತನಿಖಾಧಿಕಾರಿಯ ಪ್ರಕಾರವೇ, ಸದರಿ ದೊಣ್ಣೆಯನ್ನು ಸರ್ಕಾರಿ ಕಾಲೇಜು ಬಳಿಯಿರುವ ಪೊದೆಯಿಂದ ವಶಪಡಿಸಿಕೊಳ್ಳಲಾಗಿತ್ತು.ಈ ಸಂದರ್ಭದಲ್ಲಿ ಹೇಳಲಾದಂತೆ ಸ್ಥಳದಲ್ಲಿ ಅಥವಾ ಪೊದೆಯಿಂದ ದೊಣ್ಣೆಯನ್ನು ವಶಪಡಿಸಿಕೊಳ್ಳಲಾಗಿದೆಯೇ, ಎಂಬುದಕ್ಕೆ ಘಟನೆಗೆ ಪ್ರತ್ಯಕ್ಷ ಸಾಕ್ಷಿದಾರನೆಂದು ಕರೆಯಲಾಗುವ ಪ್ರಾ.ಸಾ.4 ರ ಸಾಕ್ಷ್ಯವನ್ನು ಉಲ್ಲೇಖಿಸುವುದು ಯೋಗ್ಯವಾದುದಾಗಿದೆ.

65. ಪ್ರಾ.ಸಾ .4 ತನ್ನ ಮುಖ್ಯ ವಿಚಾರಣೆಯಲ್ಲಿ, ರಕ್ತದ ಕಲೆಯುಳ್ಳ ದೊಣ್ಣೆಯು ಸ್ಥಳದಲ್ಲಿ ಬಿದ್ದಿತ್ತು ಎಂದು ಹೇಳಿದ್ದಾನೆ ಹಾಗೂ ಅವನು ಮುದ್ದೆ ಮಾಲು 10 ಎಂದು ಅದನ್ನು ನ್ಯಾಯಾಲಯದ ಮುಂದೆ ಗುರುತಿಸಿದ್ದಾನೆ.ಆದಾಗ್ಯೂ, ಆಪಾದಿತನು ಸ್ಥಳದಿಂದ ' ದಿಂದ ಹೋದನಂತರವೂ ಕೂಡ ಸದರಿ ದೊಣ್ಣೆಯು ಅಲ್ಲಿ ಬಿದ್ದಿತ್ತೆಂದು ಹೇಳಿರಲಿಲ್ಲ.ಆಪಾದಿತನು ದೊಣ್ಣೆಯನ್ನು ತೆಗೆದುಕೊಂಡು, ಮೃತನ ಕುತ್ತಿಗೆಯಲ್ಲಿ ಕತ್ತಿಯನ್ನು ಬಿಟ್ಟು ಹೋಗಿದ್ದನೆಂಬುದು ಪ್ರಾಸಿಕ್ಯೂಷನ್ನ ವಾದವಾಗಿದೆ.ಆದುದರಿಂದ ಅದೇನೆ ಇದ್ದರೂ ದೊಣ್ಣೆಗೆ ಸಂಬಂಧಿಸಿದಂತೆ ಪ್ರಾ.ಸಾ .4 ರ ಸಾಕ್ಷ್ಯದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸವಿದ್ದರೂ, ಆಪಾದಿತನ ಕೋರಿಕೆಯಂತೆ ದೊಣ್ಣೆ ಹಾಗೂ ಇತರ ವಸ್ತುಗಳನ್ನು ವಶಪಡಿಸಿಕೊಳ್ಳುವಿಕೆಯನ್ನು ಇತರ ಸಾಕ್ಷಿದಾರರ ಸಾಕ್ಷ್ಯವು ಎಲ್ಲಿಯೂ ವಿಷದೀಕರಿಸುವುದಿಲ್ಲ.ಆದುದರಿಂದ ಇತರ ಸಾಕ್ಷಿದಾರ ಸಾಕ್ಷ್ಯದೊಂದಿಗೆ ಸೇರಿಕೊಂಡ ತನಿಖಾಧಿಕಾರಿಯ ಸಾಕ್ಷ್ಯವನ್ನು ಸಂದೇಹಪಡಲಾಗುವುದಿಲ್ಲ.ತನಿಖಾಧಿಕಾರಿಯು ಈ ಅಪರಾಧದಲ್ಲಿ ಆಪಾದಿತನನ್ನು ಯಾಕೆ ತಪ್ಪಾಗಿ ಸಿಕ್ಕಿಸಬೇಕು ಎಂಬ ಬಗ್ಗೆ ತನಿಖಾಧಿಕಾರಿಯ ಬಾಯಿಯಿಂದ ಸಂಗತಿಗಳನ್ನು ವಿವರಿಸುವ ಯಾವುದೇ ಸುಳಿವುಗಳಿಲ್ಲ.

66. ಸಹಜವಾಗಿಯೇ ಮೃತನ ಮರಣೋತ್ತರ ಶವಪರೀಕ್ಷೆಯನ್ನು ನಡೆಸಿರುವ ಹಾಗೂ ನಿಶಾನೆ ಪಿ .16 ರ ಪ್ರಕಾರ ಮರಣೋತ್ತರ ಶವಪರೀಕ್ಷಾ ವರದಿಯನ್ನು ಎ ನೀಡಿರುವ ಪ್ರಾ.ಸಾ .16 ವೈದ್ಯ ಶಿವಕುಮಾರ್ರವರ ಸಾಕ್ಷ್ಯವು, ಮೃತನಿಗೆ ಸುಮಾರು ಆರು ಗಾಯಗಳಷ್ಟಾಗಿದ್ದವೆಂಬುದನ್ನು ಪ್ರಕಟಪಡಿಸಿದೆ.ಬಹುತೇಕ ಗಾಯಗಳು ಕತ್ತರಿಸಿದಂತಿವೆ, ಗಾಯದಸಂಖ್ಯೆ: 3 ನ್ನು ಹೊರತುಪಡಿಸಿದರೆ ಸೀಳಿದ ಗಾಯಗಳಾಗಿವೆ.ಸುಮಾರು 3 ಸೆಂ.ಮೀ. x 8 ಸೆಂ.ಮೀ x 7 ಸೆಂ.ಮೀ ಆಳದ ಕತ್ತರಿಸಿದ ಗಾಯಗಳು, ಕುತ್ತಿಗೆಯ ಮುಂಭಾಗದ ಕೋನದಲ್ಲಿ ಕಂಡುಬಂದಿವೆ. ಸ್ಟೆರ್ನೊಕ್ಲಿಡೋ ಮಾಸ್ಟಾಯಿಡ್ ಸ್ನಾಯುವಿನಿಂದ ಮತ್ತೊಂದು ಭಾಗಕ್ಕೆ ವಿಸ್ತರಿಸಿದ್ದು, ಥೈರಾಯ್ಡ್ ಅಂಗದ ಮೂಲಕ ಕತ್ತರಿಸಿಹೋಗಿದ್ದು, ಕುತ್ತಿಗೆಯ ಬೆನ್ನುಮೂಳೆಗೆ ಆಧಾರವಾಗಿರುವುದನ್ನು ಹಾಗೂ ಎಡಭಾಗದ ಕುತ್ತಿಗೆಯ ಮುಖ್ಯ ಧಮನಿಗಳು ಕಾಣಿಸುತ್ತಿವೆ.ಎಡತೋರುಬೆರಳು ಸಂಪೂರ್ಣವಾಗಿ ಕತ್ತರಿಸಿಹೋಗಿದ್ದು, ಚರ್ಮದಿಂದ ನೇತಾಡುತ್ತಿದೆ ಹಾಗೂ ಮಧ್ಯದ ಪ್ಯಾರಿಯೆಟಲ್ ಭಾಗದಲ್ಲಿ ಕತ್ತರಿಸಿದ ಗಾಯ ಅನಿಯತ ಆಕಾರದಲ್ಲಾಗಿದೆ ಎಂಬುದನ್ನು ಪ್ರಕಟಪಡಿಸಿದ್ದಾರೆ.ಚೂಪು ತುದಿಯುಳ್ಳ ಆಯುಧವು ಆಳವಾದ ಗಾಯಗಳನ್ನು ಮಾಡಿದೆಯೆಂದು ಒಪ್ಪಿಕೊಂಡಿದ್ದಾರೆ.ಅಷ್ಟೇ ಅಲ್ಲದೆ, ಮುದ್ದೆ ಮಾಲು -1 ಕಬ್ಬಿಣದ ಲಾಂಗು ಚೂಪು ತುದಿ ಆಯುಧ ಹಾಗೂ ಮುದ್ದೆಮಾಲು 10 ನೀಲಗಿರಿ ಮರದ ದೊಣ್ಣೆಯು ಮೊಂಡವಾಗಿರುವ ವಸ್ತುವಾಗಿದೆಯೆಂದು ಒಪ್ಪಿಕೊಂಡಿದ್ದಾರೆ.ಅಷ್ಟೇ ಅಲ್ಲದೆ, ಮರಣೋತ್ತರ ಶವಪರೀಕ್ಷೆಯ ಅವಧಿಯಲ್ಲಿ ಮೃತದೇಹದ ಮೇಲಾಗಿದ್ದ ಆಳದ ಗಾಯವನ್ನಾಗಲಿ ಅಥವಾ ಮೂಗೇಟನ್ನಾಗಲಿ ಅವನು ಗಮನಿಸಿಲ್ಲವೆಂದು ತಿಳಿಸಿದ್ದಾನೆ.ಆದುದರಿಂದ, ಅವನು ಯಾವುದೇ ಆಳವಾದ ಅಥವಾ ಮೂಗೇಟುಗಳನ್ನು ಗಮನಿಸದಿದ್ದರೂ ವೈದ್ಯರು ಒಪ್ಪಿಕೊಂಡಿರುವಂತೆ ವಶಪಡಿಸಿಕೊಳ್ಳಲಾದ ಆಯುಧಗಳು ಕೂಡ ಸದರಿ ಗಾಯಗಳಿಗೆ ಕಾರಣವಾಗಬಹುದಾಗಿವೆ.

67. ಮೇಲಿನ ಸದರಿ ಸಾಕ್ಷ್ಯವನ್ನು ಹೊರತುಪಡಿಸಿ, ತನಿಖಾಧಿಕಾರಿಯು,ದಿನಾಂಕ: 18.02.2011 ರಂದು, ಘಟನೆ ನಡೆದ ಜಾಗಕ್ಕೆ ಭೇಟಿ ನೀಡಿ ಪಂಚನಾಮೆ ಸಾಕ್ಷಿದಾರರ ಸಮ್ಮುಖದಲ್ಲಿ ನಿಶಾನೆ ಪಿ .1 ರ ಪ್ರಕಾರ ಶವ ಮಹಜರು ಪಂಚನಾಮವನ್ನು ನಡೆಸಿದ್ದಾರೆ ಹಾಗೂ ಮೃತದೇಹದಲ್ಲಿ ಶವ ಮಹಜರು ನಡೆಯುವ ಅವಧಿಯಲ್ಲಿ, ಅವರು ರಕ್ತದಕಲೆಯ ಮಣ್ಣನ್ನು, ಮಾದರಿ ಮಣ್ಣನ್ನು, ಕಬ್ಬಿಣದ ಲಾಂಗನ್ನು ಕಂದುಬಣ್ಣದ ಒಂದು ಜೊತೆ ಚಪ್ಪಲಿಯನ್ನು, ಕಪ್ಪು ಬಣ್ಣದ ಟೋಪಿಯನ್ನು ಕೀ ಸಮೇತ ಹೀರೋಹೋಂಡಾ ಮೋಟಾರು ಸೈಕಲನ್ನು ವಶಪಡಿಸಿಕೊಳ್ಳಲಾಗಿದೆಯೆಂದು ಹೇಳಿಕೆ ನೀಡಿದ್ದಾರೆ.ಅವರುದಿನಾಂಕ: 18.02.2011 ರಂದೇ, ಮರಣೋತ್ತರ ಶವಪರೀಕ್ಷೆ ಎ ನಡೆದ ನಂತರ, ಮುಖ್ಯ ಪೇದೆಯು, ಸರ್ಕಾರಿ ಆಸ್ಪತ್ರೆಯಿಂದ ಮೃತನ ಬಟ್ಟೆಗಳನ್ನು ತಂದಿದ್ದು ಅವುಗಳನ್ನು ಪ್ರಾ.ಸಾ .7 ಇಮ್ರಾನ್ ಉಲ್ಲಾಬೇಗ್ ಹಾಗೂ ಪ್ರಾ.ಸಾ . ಜುಬೇರ್ @ ಜುಬೇರ್ ಪಾಷಾರವರ ಸಮ್ಮುಖದಲ್ಲಿ ನಿಶಾನೆ ಪಿ .8 ರ ಮಹಜರಿನ ಮೇರೆಗೆ ಅದನ್ನು ವಶಪಡಿಸಿಕೊಳ್ಳಲಾಗಿದ್ದು, ಮೃತನ ಸದರಿ

ಬಟ್ಟೆಗಳು ಎಂದರೆ, ರಕ್ತದ ಕಲೆಯುಳ್ಳ ಕೋಟು, ಟೀಷರ್ಟ್, ಬಿಳಿ ಬನಿಯನ್ ಒಳ ಉಡುಪು ಹಾಗೂ ಪ್ಯಾಂಟುಗಳನ್ನು ಮುದ್ದೆ ಮಾಲು 14 ರಿ ೦ ದ 18 ಎ ೦ ದು ಗುರುತಿಸಲಾಗಿದೆಯೆಂದು ಹೇಳಿಕೆ ನೀಡಿದ್ದಾರೆ.ನಾವು ಈಗಾಗಲೇ ಚರ್ಚಿಸಲಾಗಿರುವ ಆಪಾದಿತನ ಕೋರಿಕೆಯಂತೆ ಬಟ್ಟೆಗಳನ್ನು ವಶಪಡಿಸಿಕೊಂಡಿರುವುದರ ಬಗ್ಗೆ ಕೂಡ ಅವರು ಮಾತನಾಡಿದ್ದಾರೆ.ವಿಚಾರಣೆ ಮಾಡಲಾದ ಸಾಕ್ಷಿದಾರರು ಎಂದರೆ ಇಮ್ರಾನ್ ಉಲ್ಲಾ ಬೇಗ್ ಪ್ರಾ-ಸಾಹಾಗೂ ಜುಬೇರ್ @, ಜುಬೇರ್ ಪಾಷಾರವರು ವಾಸ್ತವವಾಗಿ ಈ ಸಂಗತಿಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ಪ್ರತಿಕೂಲ ಸಾಕ್ಷ್ಯವಾಗಿ ಪರಿಣಮಿಸಿದ್ದಾರೆ.ಆದಾಗ್ಯೂ, ತನಿಖಾಧಿ ಕಾರಿಯು, ಈ ಸ ೦ ಗತಿಗೆ ಸಂಬಂಧಪಡುವಷ್ಟರಮಟ್ಟಿಗೆ ತನಿಖಾಧಿಕಾರಿಯು ಯಾಕೆ ನಂಬಿಲ್ಲವೆಂಬ ಎರ ಯಾವುದೇ ಕಾರಣವಿಲ್ಲ.ಈ ಸಾಕ್ಷಿದಾರರು ಪ್ರಾಸಿಕ್ಯೂಷನ್ನ ವಾದವನ್ನು ಸಮರ್ಥಿಸದಿದ್ದರೂ, ಅವರು, ಏನೇ ಆದರೂ ಪೊಲೀಸು ಠಾಣೆಯಲ್ಲಿ ಸಹಿ ಮಾಡಿರುವ ಮಹಜರು ನಿಶಾನೆ ಪಿ .8 ರಲ್ಲಿ ಅವರ ಸಹಿಗಳಿರುವುದನ್ನು ಗುರುತಿಸಲಾಗಿದೆ.ಸದರಿ ಮಹಜರನ್ನು ಪೊಲೀಸು ಠಾಣೆಯಲ್ಲಿ ಮಾಡಲಾಗಿದ್ದು ಪೊಲೀಸು ಪೇದೆಯು ಹಾಜರುಪಡಿಸಿದ ಬಟ್ಟೆಗಳನ್ನು ವಶಪಡಿಸಿಕೊಳ್ಳಲಾಗಿದೆಯೆಂಬುದು ಪ್ರಾಸಿಕ್ಯೂಷನ್ನ ವಾದ. ಅವರು ನಾವು ಪೊಲೀಸು ಠಾಣೆಯಲ್ಲಿ ಅದಕ್ಕೆ ಸಹಿ ಮಾಡಿದ್ದೇವೆ.ಆದರೆ, ಇದನ್ನು ಮೃತನ ಸದರಿ ಬಟ್ಟೆಗಳು ಈ ನಿರ್ದಿಷ್ಟ ಪ್ರಕರಣದಲ್ಲಿ ತುಂಬಾ ವಿವಾದಿತವಾಗಿರಲಿಲ್ಲವೆಂಬುದನ್ನು ಹೇಳದಿದ್ದರೂ ಇದು ಮುಂದುವರಿಯುತ್ತದೆಯೆಂದು ತಿಳಿಸಿದ್ದಾರೆ.

68. ಈ ವಸ್ತುಗಳನ್ನು ವಶಪಡಿಸಿಕೊಂಡ ನಂತರ ಹಾಗೂ ಆಪಾದಿತನ ಕೋರಿಕೆಯಂತೆ ಕೆಲವು ಬಟ್ಟೆಗಳನ್ನು ವಶಪಡಿಸಿಕೊಂಡ ನಂತರ ತನಿಖಾಧಿಕಾರಿಯು ಸದರಿ ವಸ್ತುಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಹಾಗೂ ವರದಿಯನ್ನು ಪಡೆದುಕೊಳ್ಳಲಾಗಿದೆ.ಸದರಿ ವರದಿಯನ್ನು ನಿಶಾನೆ ಪಿ .24 ರಲ್ಲಿ ಗುರುತುಹಾಕಲಾಗಿದೆ.ಒಟ್ಟಾರೆಯಾಗಿ ಸುಮಾರು 12 ಬಾಬುಗಳನ್ನು ಪರೀಕ್ಷೆಗೆ ಕಳುಹಿಸಲಾಗಿತ್ತು.ಅವುಗಳ ಪೈಕಿ ರಕ್ತದ ಕಲೆಯುಳ್ಳ ಮಣ್ಣು, ಒಂದು ಲಾಂಗು, ಒಂದು ಟೋಪಿ, ಒಂದು ಮರದ ದೊಣ್ಣೆ, ಒಂದು ಟೀಷರ್ಟ್, ಒಂದು ಪ್ಯಾಂಟ್ ಇವಿಷ್ಟು ವಸ್ತುಗಳಾಗಿದ್ದು, ನಿರ್ದಿಷ್ಟವಾಗಿ ಟೀಷರ್ಟ್ ಹಾಗೂ ಪ್ಯಾಂಟ್, ಮರದ ದೊಣ್ಣೆಯನ್ನು ಆಪಾದಿತನ ಕೋರಿಕೆಯಂತೆ ವಶಪಡಿಸಿಕೊಳ್ಳಲಾಗಿತ್ತು.ಮಾದರಿ ಮಣ್ಣು ಹಾಗೂ ರಕ್ತದ ಕಲೆಯಾಗಿದ್ದ ಮಣ್ಣು, ಒಂದು ಟೊಪ್ಪಿಗೆ ಹಾಗೂ ಒಂದು ಲಾಂಗನ್ನು ಸ್ಥಳದಲ್ಲಿ ವಶಪಡಿಸಿಕೊಳ್ಳಲಾಗಿತ್ತು ಹಾಗೂ ಆಪಾದಿತನಿಗೆ ಸೇರಿದ ಮೇಲುಕೋಟು, ಒಂದು ಟೀಷರ್ಟ್, ಒಂದು ಬಿಳಿ ಬನಿಯನ್ ಹಾಗೂ 9 ಒಂದು ಪ್ಯಾಂಟನ್ನು, ಪೊಲೀಸು ಠಾಣೆಯಲ್ಲಿ ವಶಪಡಿಸಿಕೊಳ್ಳಲಾಗಿತ್ತು.ಕ್ರಮಸಂಖ್ಯೆ:1 ರಿಂದ 12 ರ ವರೆಗಿನ ಸಂಖ್ಯೆಗಳೆಂದು ಅವುಗಳನ್ನು ಗುರುತು ಹಾಕಲಾಗಿತ್ತು.ಬಾಬುಸಂಖ್ಯೆ: 1 ಹಾಗೂ 2 ನ್ನು ಹೊರತುಪಡಿಸಿದರೆ, ಎಲ್ಲಾ ಇತರ ಬಾಬುಗಳು ರಕ್ತದ ಕಲೆಯಿಂದ ಕೂಡಿದ್ದು, ಅದರಲ್ಲಿ, ಅವು ಮನುಷ್ಯನ ರಕ್ತದ ಕಲೆಯನ್ನು ನಿರ್ದಿಷ್ಟವಾಗಿ ' ಎ ' ಗುಂಪಿನ ರಕ್ತದ ಕಲೆಯನ್ನು ಹೊಂದಿದ್ದವು ಎಂದು ತಿಳಿಸಲಾಗಿದೆ.ಈ ನಿರ್ದಿಷ್ಟ ದಸ್ತಾವೇಜನ್ನು ನ್ಯಾಯಾಲಯದ ಮುಂದೆ ರುಜುವಾತುಪಡಿಸುವ ಅಗತ್ಯವಿಲ್ಲ.ಆದರೆ, ಆಪಾದಿತನು, ಸದರಿ ದಸ್ತಾವೇಜು ವಿವಾದಿತ ಅಂಶಗಳನ್ನು ಹೊಂದಿದ್ದರೆ ಭಾರತ ದಂಡ ಸಂಹಿತೆಯ 292 ಹಾಗೂ 293 ನೇ ಪ್ರಕರಣದ ಪ್ರಕಾರ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವ ಸಾಕ್ಷ್ಯವೆಂದು ಭಾವಿಸಬಹುದು ಅಥವಾ ನ್ಯಾಯಾಲಯವು ಇದು ನ್ಯಾಯಯುತ ಹಾಗೂ ಅಗತ್ಯವೆಂದು ಭಾವಿಸಿದರೆ, ಆಗ ನಿರ್ದಿಷ್ಟ ದಸ್ತಾವೇಜುಗಳನ್ನು ರುಜುವಾತುಪಡಿಸಲು ಸಾಕ್ಷಿದಾರನನ್ನು ಮಾತ್ರ ಕರೆಯಬಹುದು.ಇಲ್ಲದಿದ್ದರೆ, ಆಪಾದಿತನು ಸದರಿ ದಸ್ತಾವೇಜಿನ ಬಗ್ಗೆ ವಿವಾದ ತೆಗೆದರೆ, ಅವನು ಸದರಿ ದಸ್ತಾವೇಜಿನ ಅಂಶಗಳಿಗೆ ಸಂಬಂಧಿಸಿದಂತೆ ಯಾವುದೇ ಸಂಶಯವನ್ನು ಹೊರತೆಗೆಯಲು ನಿಶಾನೆ ಪಿ .24 ನ್ನು ನೀಡಿರುವ ಸದರಿ ಸಾಕ್ಷಿದಾರನ ಸಮ್ಮುಖದಲ್ಲಿ ಪಡೆದುಕೊಳ್ಳಲು ನ್ಯಾಯಾಲಯಕ್ಕೆ ಅವನು ಮನವಿ ಮಾಡಬೇಕು.ಆದುದರಿಂದ, ಆಪಾದಿತನ ಬಟ್ಟೆಗಳಲ್ಲಾದ ಹಾಗೂ ಮೃತನ ಬಟ್ಟೆಗಳಲ್ಲಾದ ಕಲೆಗಳ ರಕ್ತದ ಗುಂಪು ಹಾಗೂ ಅಪರಾಧ ಮಾಡಲು ಬಳಸಿದ ಆಯುಧ, ದೊಣ್ಣೆ ಹಾಗೂ (ಕತ್ತಿ) ಎಲ್ಲವೂ, ಆಪಾದಿತನ ರಕ್ತದ ಗುಂಪನ್ನು ತಾಳೆ ಮಾಡಲಾಗಿರುವ 6 ' ಎ ' ಗುಂಪಿನ ರಕ್ತವನ್ನು ಒಳಗೊಂಡಿವೆ. ದೋಷಾರೋಪಣೆ ಮಾಡಲಾಗಿರುವ ಸಾಕ್ಷ್ಯದ ಬಗ್ಗೆ ಆಪಾದಿತನು ಯಾವುದೇ ವಿವರಣೆ ನೀಡಿರುವುದಿಲ್ಲ.ಆದುದರಿಂದ ಮೇಲಿನ ಸದರಿ ಸನ್ನಿವೇಶವೂ ಅಪರಾಧಕ್ಕೆ ತುಂಬಾ ಬಲಯುತವಾಗಿ ಆಪಾದಿತನಿಗೆ ಸಂಬಂಧಪಡುತ್ತವೆ.

69. ಪ್ರಾಸಿಕ್ಯೂಷನ್ನು ಅಂದಾಜು ಮಾಡಿದ ಒಂದು ಅಥವಾ ಎರಡು ಸನ್ನಿವೇಶಗಳು ರುಜುವಾತಾಗದಿದ್ದರೆ, ಸಂಪೂರ್ಣ ಪ್ರಾಸಿಕ್ಯೂಷನ್ ವಾದವನ್ನು ರುಜುವಾತುಪಡಿಸಿಲ್ಲ ಎಂದ ಹಾಗಲ್ಲ.ಅಂತಿಮವಾಗಿ ನ್ಯಾಯಾಲಯವು, ಪ್ರಾಸಿಕ್ಯೂಷನ್ನು ಸಂಪೂರ್ಣ ಸಂಬಂಧವನ್ನು ಕಲ್ಪಿಸಿದೆಯೇ, ಅದರಲ್ಲೂ ನಿರ್ದಿಷ್ಟವಾಗಿ

ಪ್ರತ್ಯಕ್ಷ ಸಾಕ್ಷಿದಾರರ ಆವೃತ್ತಿಯಿದ್ದಾಗ, ಸನ್ನಿವೇಶವನ್ನು ರುಜುವಾತುಪಡಿಸುವ ಒಟ್ಟು ಪರಿಣಾಮವನ್ನು ನ್ಯಾಯಾಲಯವು ನೋಡಬೇಕು.ಕೆಲವು ಸನ್ನಿವೇಶಗಳು ರುಜುವಾತಾಗದಿದ್ದರೆ, ಪ್ರತ್ಯಕ್ಷಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ನ್ಯಾಯಾಲಯವು ಅಗತ್ಯ ಹಸ್ತಕ್ಷೇಪವನ್ನು ಮಾಡಬಹುದು.

70. ಆದುದರಿಂದ, ಎಲ್ಲಾ ರುಜುವಾತಾದ ಸಂಗತಿಗಳ ಒಟ್ಟು ಹಾಗೂ ಸಂಚಿತ ಮೌಲ್ಯಮಾಪನವನ್ನು ಮಾಡಿದ ಮೇಲೆ, ಆಪಾದಿತನನ್ನು, ಅಪರಾಧದ ಅಪರಾಧಿಯಾಗಿರಬೇಕು ಎಂಬ ಸುಳಿವನ್ನು ನೀಡಬಹುದು.ಕೆಲವು ಅಸಂಗತತೆಗಳಿದ್ದರೂ, ಮೇಲೆ ಗಮನಿಸಲಾದ ವೈರುದ್ಯಗಳು ಹಾಗೂ ಲೋಪಗಳನ್ನು, ಅಧಿವಿಚಾರಣಾ ನ್ಯಾಯಾಲಯವು ಮೌಲ್ಯಮಾಪನ ಮಾಡಿದಂಥ ಸಂಪೂರ್ಣ ಸಾಕ್ಷ್ಯದ ಒಟ್ಟಾರೆ ಪರಿಗಣನೆ ಮಾಡಿ, ಒಟ್ಟಾರೆ ಪ್ರಾಸಿಕ್ಯೂಷನ್ನ ವಾದವನ್ನು ಬೇರು ಸಹಿತ ಕಿತ್ತು ಹಾಕಲು ಅವು ಸಾಕಾಗುವುದಿಲ್ಲವೆಂದು ತೋರಿಸಬಹುದು.ಹೀಗಾಗಿ ಅಧಿವಿಚಾರಣಾ ನ್ಯಾಯಾಲಯವು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಬದಲಾಯಿಸುವ ಯಾವುದೇ ಬಲಯುತವಾದ ಕಾರಣಗಳನ್ನು ನಾವು ಗುರುತಿಸಿಲ್ಲ.ಅಧಿವಿಚಾರಣಾ ನ್ಯಾಯಾಲಯವು, ಈಗಾಗಲೇ ಈ ನ್ಯಾಯಾಲಯದ ಮುಂದೆ ಮಂಡಿಸಿದ ಎಲ್ಲಾ ಆಧಾರಗಳನ್ನು ಸವಿವರವಾಗಿ ಪರಿಗಣಿಸಿದ್ದು ಎಲ್ಲಾ ಯುಕ್ತ ತೀರ್ಪಿನ ಮೂಲಕ ಕಾನೂನುಬದ್ದ ಹಾಗೂ ತಾರ್ಕಿಕ ಕಾರಣಗಳನ್ನು ಎತ್ತಿಹಿಡಿದಿದ್ದು ಅಪರಾಧ ನಿರ್ಣಯದ ತೀರ್ಪನ್ನು ಹಾಗೂ ಆಪಾದಿತನ ವಿರುದ್ಧ ಶಿಕ್ಷೆಯನ್ನು ಹೊರಡಿಸಿದೆ.

71. ಮೇಲಿನ ಸದರಿ ಸನ್ನಿವೇಶಗಳ ಮೇರೆಗೆ ನಮ್ಮ ಅಭಿಪ್ರಾಯವೇನೆಂದರೆ ಅಪೀಲು ಯಾವುದೇ ಗುಣಾರ್ಹತೆಯನ್ನು ಹೊಂದಿರುವುದಿಲ್ಲ ಹಾಗೂ ಇದು ವಜಾಗೊಳಿಸಲು ತಕ್ಕುದಾಗಿರುತ್ತದೆ.

ತದನುಸಾರವಾಗಿ ವಜಾಗೊಳಿಸಲಾಗಿದೆ.

ತನಿಖಾಧಿ ಕಾರಿಗಳು ಹಾಗೂ ಸರ್ಕಾರಿ ಅಭಿಯೋಜಕರನ್ನು ತರಬೇತುಗೊಳಿಸಲು ಆಗಾಗ ರಿಫ್ರೆಶ್ (ಪುನಶ್ಚತನ) ಕೋರ್ಸುಗಳನ್ನು ಅಥವಾ ಇದಕ್ಕೆ ಸಂಬಂಧಿಸಿದಂತೆ ವಿಚಾರಗೋಷ್ಠಿಗಳನ್ನು ನಡೆಸುವ ಮೂಲಕ ಯುಕ್ತ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಪೊಲೀಸು ಮಹಾನಿರ್ದೇಶಕರಿಗೆ ಹಾಗೂ ಪೊಲೀಸು ಮಹಾ ನಿರೀಕ್ಷಕರಿಗೆ ಹಾಗೂ ಪ್ರಾಸಿಕ್ಯೂಷನ್ ನಿರ್ದೇಶಕರಿಗೆ ಈ ಪ್ರತಿಯನ್ನು ಕಳುಹಿಸಲು ಅಲ್ಲದೆ, ಈ ತೀರ್ಪಿನ 56 ಹಾಗೂ 57 ನೇ ಕಂಡಿಕೆಗಳಲ್ಲಿ ಹೇಳಲಾಗಿರುವ ದೃಷ್ಟಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಕಡೆಯಿಂದ ಯಾವುದೇ ಲೋಪಗಳಾದರೆ ಗಂಭೀರ ಕ್ರಮ ಕೈಗೊಳ್ಳಬೇಕೆಂದು ಸೂಚಿಸಲು ರಿಜಿಸ್ಟ್ರಾರ್ (ಜನರಲ್) ರವರು ಈ ಮೂಲಕ ನಿರ್ದೇಶಿತರಾಗಿದ್ದಾರೆ.